1. ಹಸು (ಕರ್ತೃ) 2. ಹಸುವನ್ನು (ಕರ್ಮ) 3. ಹಸುವಿನಿಂದ, ಹಸುವಿನ ಕೂಡ, ಹಸುವಿನದ್ವಾರಾ 4. ಹಸುವಿಗೋಸ್ಕರ 5. ಹಸುವಿನ ದೆಸೆಯಿಂದ, ಹಸುವಿಗಿಂತ 6. ಹಸುವಿನ, ಹಸುವಿಗೆ 7. ಹಸುವಿನಲ್ಲಿ 8. ಎಲೈ ಹಸುವೇ!

ಗಮನಿಸಿ;—ಧೇನು ಶಬ್ದಕ್ಕೆ ಚತುರ್ಥೀ, ಪಂಚಮೀ, ಷಷ್ಠೀ, ಸಪ್ತಮೀ ಏಕವಚನದಲ್ಲಿ ಎರಡು ರೂಪಗಳಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ऋकारान्त : स्त्रीलिंग : 'मातृ' शब्द :

ಋಕಾರಾಂತಃ ಸ್ತ್ರೀಲಿಂಗಃ 'ಮಾತೃ' ಶಬ್ದಃ

1.	माता ಮಾತಾ	मातरौ ಮಾತರೌ	मातरः ಮಾತರಃ
2.	मातरं ಮಾತರಂ	मातरौ ಮಾತರೌ	मातॄः ಮಾತೄಃ
3.	मात्रा ಮಾತ್ರಾ	मातृभ्यां ಮಾತೃಭ್ಯಾಂ	मातृभिः ಮಾತೃಭಿಃ
4.	मात्रे ಮಾತ್ರೇ	मातृभ्यां ಮಾತೃಭ್ಯಾಂ	मातृभ्यः ಮಾತೃಭ್ಯಃ
5.	मातुः ಮಾತುಃ	मातृभ्यां ಮಾತೃಭ್ಯಾಂ	मातृभ्यः ಮಾತೃಭ್ಯಃ
6.	मातुः ಮಾತುಃ	मात्रोः ಮಾತ್ರೋಃ	मातॄणाम् ಮಾತೄಣಾಂ
7.	मातरि ಮಾತರಿ	मात्रोः ಮಾತ್ರೋಃ	मातृषु ಮಾತೃಷು

ಏಕವಚನ ರೂಪಕ್ಕೆ ಅರ್ಥ—

1. ತಾಯಿ (ಕರ್ತೃ) 2. ತಾಯಿಯನ್ನು (ಕರ್ಮ) 3. ತಾಯಿಯಿಂದ, ತಾಯಿ ಕೂಡ, ತಾಯಿಯ ದ್ವಾರಾ 4. ತಾಯಿಗೋಸ್ಕರ 5. ತಾಯಿಯ ದೆಸೆಯಿಂದ, ತಾಯಿಗಿಂತ 6. ತಾಯಿಯ, ತಾಯಿಗೆ 7. ತಾಯಿಯಲ್ಲಿ 8. ಎಲೈ ತಾಯಿಯೇ!

ಗವನಿಸಿ:—ಸ್ವಸೃ, ದುಹಿತೃ, ನನಾಂದೃ ಮೊದಲಾದ ಶಬ್ದಗಳನ್ನು 'ಮಾತೃ' ಶಬ್ದದಂತೆ ಹೇಳಬೇಕು. 'ಮಾತೃ' ಶಬ್ದ ದ್ವಿತೀಯಾ ವಿಭಕ್ತಿ ಬಹುವಚನ ಬಿಟ್ಟು ಮಿಕ್ಕ ಎಲ್ಲ ವಿಭಕ್ತಿಗಳಲ್ಲಿ 'ಪಿತೃ' ಶಬ್ದದಂತೆ ಹೇಳಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಪುಂಸಕ ಲಿಂಗ ಪದಗಳು

ज्ञानं			वाक्यम्		
ಜ್ಞಾನಂ	ತಿಳವಳಿಕೆ		ವಾಕ್ಯಂ	ವಾಕ್ಯವು	
जलं			तत्त्वम्		
ಜಲಂ	ನೀರು		ತತ್ವಂ	ವಾಸ್ತವ	
फलं			दानम्		
ಫಲಂ	ಹಣ್ಣು		ದಾನಂ	ದಾನವು	
धनं			पुण्यम्		
ಧನಂ	ಹಣ		ಪುಣ್ಯಂ	ಪುಣ್ಯ	
वन			पापम्		
ವನಂ	ಕಾಡು		ಪಾಪಂ	ಪಾಪವು	
पद्म			अन्नम्		
ಪದ್ಮಂ	ಕಮಲವು		ಅನ್ನಂ	ಅನ್ನ	
नेत्रं			द्रव्यम्		
ನೇತ್ರಂ	ಕಣ್ಣು		ದ್ರವ್ಯಂ	ಹಣ	
गात्रं			शुभम्		
ಗಾತ್ರಂ	ದೇಹವು		ಶುಭಂ	ಮಂಗಳ	
सत्यं			भयम्		
ಸತ್ಯಂ	ಸತ್ಯ		ಭಯಂ	ಭಯ	
नृत्यं			भद्रम्		
ನೃತ್ಯಂ	ನಾಟ್ಯ		ಭದ್ರಂ	ಕ್ಷೇಮ	

Sri Vidyabharathi Book Centre, Sringeri

CC-O. In Public Domain. Digitized by eGangotri

अकारान्त नपुंसकलिंगो 'ज्ञान' शब्द :

ಅಕಾರಾಂತ ನಪುಂಸಕಲಿಂಗೋ 'ಜ್ಞಾನ' ಶಬ್ದ:

1.	ज्ञानं ಜ್ಞಾನಂ	ज्ञाने ಜ್ಞಾನೇ	ज्ञानानि ಜ್ಞಾನಾನಿ
2.	ज्ञानं ಜ್ಞಾನಂ	ज्ञाने ಜ್ಞಾನೇ	ज्ञानानि ಜ್ಞಾನಾನಿ
3.	ज्ञानेन ಜ್ಞಾನೇನ	ज्ञानाभ्यां ಜ್ಞಾನಾಭ್ಯಾಂ	ज्ञानैः ಜ್ಞಾನೈಃ
4.	ज्ञानाय ಜ್ಞಾನಾಯ	ज्ञानाभ्यां ಜ್ಞಾನಾಭ್ಯಾಂ	ज्ञानेभ्यः ಜ್ಞಾನೇಭ್ಯಃ
5.	ज्ञानात् ಜ್ಞಾನಾತ್	ज्ञानाभ्यां ಜ್ಞಾನಾಭ್ಯಾಂ	ज्ञानेभ्यः ಜ್ಞಾನೇಭ್ಯಃ
6.	ज्ञानस्य ಜ್ಞಾನಸ್ಯ	ज्ञानयोः ಜ್ಞಾನಯೋಃ	ज्ञानानाम् ಜ್ಞಾನಾನಾಂ
7.	ज्ञाने ಜ್ಞಾನೇ	ज्ञानयोः ಜ್ಞಾನಯೋಃ	ज्ञानेषु ಜಾ ನೇಷು
8.	हे ज्ञान ! ಹೇ ಜ್ಞಾನ	हे ज्ञाने ! ಹೇ ಜ್ಞಾನೇ	हे ज्ञानानि ! ಹೇ ಜ್ಞಾನಾನಿ

ಏಕವಚನ ರೂಪಕ್ಕೆ ಅರ್ಥ—

1. ತಿಳವಳಿಕೆ (ಕರ್ತ) 2. ತಿಳವಳಿಕೆಯನ್ನು (ಕರ್ಮ) 3. ತಿಳವಳಿಕೆಯಿಂದ. ತಿಳವಳಿಕೆಯ ಕೂಡ 4. ತಿಳವಳಿಕ ಗೋಸ್ಕರ 5. ತಿಳವಳಿಕೆಯ ದೆಸೆಯಿಂದ, ತಿಳವಳಿಕೆಗಿಂತ 6. ತಿಳವಳಿಕೆಯ, ತಿಳವಳಿಕೆಗೆ 7. ತಿಳವಳಿಕೆಯಲ್ಲಿ 8. ಎಲೈ ತಿಳವಳಿಕಯೇ !

ಗವನಿಸಿ— ಈ ಶಬ್ದದಲ್ಲಿ ಪ್ರಥಮಾ, ದ್ವಿತೀಯಾ ವಿಭಕ್ತಿಗಳ ರೂಪಗಳು ಒಂದೇ ತರಹ ಯಿರುತ್ತವೆ, ತೃತೀಯಾ ವಿಭಕ್ತಿ ಮೊದಲು 'ರಾಮ' ಶಬ್ದದಂತೆ ತಿಳಿಯಿರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

इकारान्त नपुंसकलिंगः 'वारि' शब्दः
ಇಕಾರಾಂತ ನಪುಂಸಕಲಿಂಗಃ 'ವಾರಿ' ಶಬ್ದಃ

	वारि ವಾರಿ	वारिणी ವಾರಿಣೀ	वारीणि ವಾರೀಣಿ
2.	वारि ವಾರಿ	वारिणी ವಾರಿಣೀ	वारीणि ವಾರೀಣಿ
3.	वारिणा ವಾರಿಣಾ	वारिभ्यां ವಾರಿಭ್ಯಾಂ	वारिभिः ವಾರಿಭಿಃ
4.	वारिणे ವಾರಿಣೇ	वारिभ्यां ವಾರಿಭ್ಯಾಂ	वारिभ्यः ವಾರಿಭ್ಯಃ
5.	वारिणः ವಾರಿಣಃ	वारिभ्यां ವಾರಿಭ್ಯಾಂ	वारिभ्यः ವಾರಿಭ್ಯಃ
6.	वारिणः ವಾರಿಣಃ	वारिणोः ವಾರಿಣೋಃ	वारीणाम् ಪಾರೀಣಾಂ
7.	वारिणि ವಾರಿಣಿ	वारिणोः ವಾರಿಣೋಃ	वारिषु ವಾರಿಷು
8.	हे वारे, हे वारि ಹೇ ವಾರೇ, ಹೇ ವಾರಿ	हे वारिणी ಹೇ ವಾರಿಣೀ	हे वारीणि ಹೇ ವಾರೀಣಿ

ಏಕವಚನ ರೂಪಕ್ಕೆ ಅರ್ಥ—

1. ನೀರು (ಕರ್ತೃ) 2. ನೀರನ್ನು (ಕರ್ಮ) 3. ನೀರಿನಿಂದ, ನೀರಿನ ಸಹ, ನೀರಿನ ದ್ವಾರಾ 4. ನೀರಿಗೋಸ್ಕರ 5. ನೀರಿನ ದೆಸೆಯಿಂದ. ನೀರಿಗಿಂತ 6. ನೀರಿನ, ನೀರಿಗೆ 7. ನೀರಲ್ಲಿ 8. ಎಲೈ ನೀರೇ !

ಗಮನಿಸಿ— ಇ, ಉ, ಋಕಾರಾಂತ ನಪುಂಸಕಲಿಂಗ ಶಬ್ದಗಳಿಗೆ ಸಂಬೋಧನ ಪ್ರಥಮೈಕ ವಚನದಲ್ಲಿ ಎರಡು ರೂಪಗಳುಂಟು.

2. ಅಕ್ಷಿ, ಕಾರಾಂಘ್ರಿ, ಪಾದಪಾಣಿ. ಹರ ಹರಿ ಮೊದಲಾದ ಶಬ್ದಗಳನ್ನು 'ವಾರಿ' ಶಬ್ದದಂತೆ ಹೇಳಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಶೇಷ ಶಬ್ದಗಳು

इकारान्त : पुंलिंग : 'सखि' शब्द :

ಇಕಾರಾಂತಃ ಪುಂಲಿಂಗಃ 'ಸಖಿ' ಶಬ್ದಃ

1.	सखा ಸಖಾ	सखायौ ಸಖಾಯೌ	सखायः ಸಖಾಯಃ
2.	सखायं ಸಖಾಯಂ	सखायौ ಸಖಾಯೌ	सखीन् ಸಖೀನ್
3.	सख्या ಸಖ್ಯಾ	सखिभ्यां ನಖಿಭ್ಯಾಂ	सखिभिः ಸಖಿಭಿಃ
4.	सख्ये ಸಖ್ಯೇ	सखिभ्यां ಸಖಿಭ್ಯಾಂ	सखिभ्यः ಸಖಿಭ್ಯಃ
5.	सख्युः ಸಖ್ಯುಃ	सखिभ्यां ಸಖಿಭ್ಯಾಂ	सखिभ्यः ಸಖಿಭ್ಯಃ
6.	सख्युः ಸಖ್ಯುಃ	सख्योः ಸಖ್ಯೋಃ	सखीनाम् ಸಖೀನಾಂ
7.	सख्यौ ಸಖ್ಯೌ	सख्योः ಸಖ್ಯೋಃ	सखिषु ಸಖಿಷು
8.	हे सखे ಹೇ ಸಖೇ	हे सखायौ ಹೇ ಸಖಾಯೌ	हे सखायः ಹೇ ಸಖಾಯಃ

ಏಕವಚನ ರೂಪಕ್ಕೆ ಅರ್ಥ—

1. ಮಿತ್ರನು (ಕರ್ತೃ) 2. ಮಿತ್ರನನ್ನು (ಕರ್ಮ) 3. ಮಿತ್ರನಿಂದ ಮಿತ್ರನ ಕೂಡ 4. ಮಿತ್ರನಿಗೋಸ್ಕರ 5. ಮಿತ್ರನ ದೆಸೆಯಿಂದ, ಮಿತ್ರನಿಗಿಂತ 6. ಮಿತ್ರನ, ಮಿತ್ರನಿಗೆ 7. ಮಿತ್ರನಲ್ಲಿ 8. ಎಲೈ ಮಿತ್ರನೇ!

ಗಮನಿಸಿ— 'ಸಖಿ' ಶಬ್ದ ತತ್ಪುರುಷ ಸಮಾಸದಲ್ಲಿ ಅಕಾರಾಂತವಾಗಿ (ಸಖ ಎಂದು) ಆಗುತ್ತದೆ. ಲಕ್ಷ್ಮಣ ಸಖಃ-ಲಕ್ಷ್ಮಣ ಮಿತ್ರನು.

Sri Vidyabharathi Book Centre, Sringeri

CC-O. In Public Domain. Digitized by eGangotri

नकारान्तः पुंलिंग : 'राजन्' शब्द :

ನಕಾರಾಂತಃ ಪುಂಲಿಂಗಃ 'ರಾಜನ್' ಶಬ್ದಃ

1.	राजा ರಾಜಾ	राजानौ ರಾಜಾನೌ	राजानः ರಾಜಾನಃ
2.	राजानम् ರಾಜಾನಂ	राजानौ ರಾಜಾನೌ	राज्ञः ರಾಜ್ಞಃ
3.	राज्ञा ರಾಜ್ಞಾ	राजभ्यां ರಾಜಭ್ಯಾಂ	राजभिः ರಾಜಭಿಃ
4.	राज्ञे ರಾಜ್ಞೇ	राजभ्यां ರಾಜಭ್ಯಾಂ	राजभ्यः ರಾಜಭ್ಯಃ
5	राज्ञः ರಾಜ್ಞಃ	राजभ्यां ರಾಜಭ್ಯಾಂ	राजभ्यः ರಾಜಭ್ಯಃ
6	राज्ञः ರಾಜ್ಞಃ	राज्ञोः ರಾಜ್ಞೋಃ	राज्ञाम् ರಾಜ್ಞಾಂ
7.	राज्ञि, राजनि ರಾಜ್ಞಿ, ರಾಜನಿ	राज्ञोः ರಾಜ್ಞೋಃ	राजसु ರಾಜಸು
8.	हे राजन् ಹೇ ರಾಜನ್	हे राजानौ ಹೇ ರಾಜಾನೌ	हे राजानः ಹೇ ರಾಜಾನಃ

ಏಕವಚನ ರೂಪಕ್ಕೆ ಅರ್ಥ—

1. ಅರಸನು (ಕರ್ತೃ) 2. ಅರಸನನ್ನು (ಕರ್ಮ) 3. ಅರಸಿನಿಂದ. ಅರಸಿನ ಕೂಡ 4. ಅರಸಿನ ಗೋಸ್ಕರ 5. ಅರಸಿನ ದೆಸೆಯಿಂದ, ಅರಸಿಗಿಂತ 6. ಅರಸನ, ಅರಸಿಗೆ 7. ಅರಸಲ್ಲಿ 8. ಎಲೈ ಅರಸನೇ!

ಗಮನಿಸಿ— 'ರಾಜನ್' ಶಬ್ದವು ತತ್ಪುರುಷ, ಕರ್ಮಧಾರಯ ಮಾಸಗಳಲ್ಲಿ ಅಕಾರಾಂತವಾಗಿ (ರಾಜ ಎಂದು) ಆಗುತ್ತದೆ.

ಉದಾ:— ದೇವರಾಜಃ, ಮಹಾರಾಜಃ.

Sri Vidyabharathi Book Centre, Sringeri

CC-O. In Public Domain. Digitized by eGangotri

नकारान्त : नपुंसकलिंगः 'नामन्' शब्दः
ನಕಾರಾಂತ ನಪುಂಸಕಲಿಂಗಃ 'ನಾಮನ್' ಶಬ್ದಃ

1.	नाम ನಾಮ	नाम्नी, नामनी ನಾಮ್ನೀ, ನಾಮನೀ	नामानि ನಾಮಾನಿ
2.	नाम ನಾಮ	नाम्नी, नामनी ನಾಮ್ನೀ, ನಾಮನೀ	नामानि ನಾಮಾನಿ
3.	नाम्ना ನಾಮ್ನಾ	नामभ्यां ನಾಮಭ್ಯಾಂ	नामभिः ನಾಮಭಿಃ
4.	नाम्ने ನಾಮ್ನೇ	नामभ्यां ನಾಮಭ್ಯಾಂ	नामभ्यः ನಾಮಭ್ಯಃ
5.	नाम्नः ನಾಮ್ನಃ	नामभ्यां ನಾಮಭ್ಯಾಂ	नामभ्यः ನಾಮಭ್ಯಃ
6.	नाम्नः ನಾಮ್ನಃ	नाम्नोः ನಾಮ್ನೋಃ	नाम्नां ನಾಮ್ನಾಂ
7.	नाम्नि, नामनि ನಾಮ್ನಿ, ನಾಮನಿ	नाम्नोः ನಾಮ್ನೋಃ	नामसु ನಾಮಸು
8.	हे नामन् - हे नाम ಹೇನಾಮನ್, ಹೇನಾಮ	हे नाम्नी-हे नामनी ಹೇನಾಮ್ನೀ, ಹೇನಾಮನೀ	हे नामानि ಹೇನಾಮಾನಿ

ಏಕವಚನ ರೂಪಕ್ಕೆ ಅರ್ಥ—

1. ಹೆಸರು (ಕರ್ತೃ) 2. ಹೆಸರನ್ನು (ಕರ್ಮ) 3. ಹೆಸರಿನಿಂದ, ಹೆಸರಿನ ಕೂಡ 4. ಹೆಸರಿಗೋಸ್ಕರ 5. ಹೆಸರಿನ ದೆಸೆಯಿಂದ, ಹೆಸರಿಗಿಂತ 6. ಹೆಸರಿನ, ಹೆಸರಿಗೆ 7. ಹೆಸರಿನಲ್ಲಿ 8. ಎಲೈ ಹೆಸರೇ!

ಗಮನಿಸಿ—ಈ ಶಬ್ದಕ್ಕೆ ಪ್ರಥಮಾ, ದ್ವಿತೀಯಾ ದ್ವಿವಚನಗಳಲ್ಲಿಯು ಸಪ್ತಮ್ಯೇಕವಚನದಲ್ಲಿಯು. ಸಂಬೋಧನ ಪ್ರಥಮೈಕ ವಚನ, ದ್ವಿವಚನಗಳಲ್ಲಿಯು ಎರಡು ರೂಪಗಳುಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

नकारान्त : पुंलिंग 'आत्मन्' शब्द :
ನಕಾರಾಂತಃ ಪುಂಲಿಂಗಃ 'ಆತ್ಮನ್' ಶಬ್ದಃ

1.	आत्मा ಆತ್ಮಾ	आत्मानौ ಆತ್ಮಾನೌ	आत्मानः ಆತ್ಮಾನಃ
2.	आत्मानम् ಆತ್ಮಾನಂ	आत्मानौ ಆತ್ಮಾನೌ	आत्मनः ಆತ್ಮನಃ
3.	आत्मना ಆತ್ಮನಾ	आत्मभ्यां ಆತ್ಮಭ್ಯಾಂ	आत्मभिः ಆತ್ಮಭಿಃ
4.	आत्मने ಆತ್ಮನೇ	आत्मभ्यां ಆತ್ಮಭ್ಯಾಂ	आत्मभ्यः ಆತ್ಮಭ್ಯಃ
5.	आत्मनः ಆತ್ಮನಃ	आत्मभ्यां ಆತ್ಮಭ್ಯಾಂ	आत्मभ्यः ಆತ್ಮಭ್ಯಃ
6.	आत्मनः ಆತ್ಮನಃ	आत्मनोः ಆತ್ಮನೋಃ	आत्मनाम् ಆತ್ಮನಾಂ
7.	आत्मनि ಆತ್ಮನಿ	आत्मनोः ಆತ್ಮನೋಃ	आत्मसु ಆತ್ಮಸು
8.	हे आत्मन् ಹೇ ಆತ್ಮನ್	हे आत्मानौ ಹೇ ಆತ್ಮಾನೌ	हे आत्मानः ಹೇ ಆತ್ಮಾನಃ

ಗಮನಿಸಿ—ಅಧ್ವನ್, ಯಜ್ವನ್, ಬ್ರಹ್ಮನ್, ಸುಪರ್ವನ್ ಮೊ॥ ಶಬ್ದಗಳನ್ನು 'ಆತ್ಮನ್' ಶಬ್ದದಂತೆ ಹೇಳಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

सकारान्त नपुंसकलिंग : 'मनस्' शब्द :

ಸಕಾರಾಂತ ನಪುಂಸಕಲಿಂಗಃ 'ಮನಸ್' ಶಬ್ದಃ

1.	मन : ಮನ:	मनसी ಮನಸೀ	मनांसि ಮನಾಂಸಿ
2.	मन : ಮನ:	मनसी ಮನಸೀ	मनांसि ಮನಾಂಸಿ
3.	मनसा ಮನಸಾ	मनोभ्यां ಮನೋಭ್ಯಾಂ	मनोभिः ಮನೋಭಿ:
4.	मनसे ಮನಸೇ	मनोभ्यां ಮನೋಭ್ಯಾಂ	मनोभ्य : ಮನೋಭ್ಯ:
5.	मनस : ಮನಸ:	मनोभ्यां ಮನೋಭ್ಯಾಂ	मनोभ्य : ಮನೋಭ್ಯ:
6.	मनसः ಮನಸ:	मनसो : ಮನಸೋ:	मनसाम् ಮನಸಾಂ
7.	मनसि ಮನಸಿ	मनसो : ಮನಸೋ:	मनस्सु ಮನಸ್ಸು
8.	हे मन : ಹೇ ಮನ:	हे मनसी ಹೇ ಮನಸೀ	हे मनांसि ಹೇ ಮನಾಂಸಿ

ಗಮನಿಸಿ—ತಪಸ್, ಯಶಸ್, ಶ್ರೇಯಸ್ ಮೊ॥ ಶಬ್ದಗಳನ್ನು 'ಮನಸ್' ಶಬ್ದದಂತೆ ಹೇಳಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವನಾಮಗಳು

दकारान्तः (त्रिषु लिंगेषु समानः) 'युष्मद्' शब्दः
ದಕಾರಾಂತಃ (ತ್ರಿಷು ಲಿಂಗೇಷು ಸಮಾನಃ 'ಅಸ್ಮದ್' ಶಬ್ದಃ)

अहं	**आवां**	**वयम्**
ಅಹಂ	ಅವಾಂ	ವಯಂ
ನಾನು	ನಾವಿಬ್ಬರು	ನಾವು
मां, मा	**आवां, नौ**	**अस्मान्, नः**
ಮಾಂ, ಮಾ	ಆವಾಂ, ನೌ	ಅಸ್ಮಾಸ್, ನ:
ನನ್ನನ್ನು	ನಮ್ಮಿಬ್ಬರನ್ನು	ನಮ್ಮನ್ನು
मया	**आवाभ्यां**	**अस्माभिः**
ಮಯಾ	ಆವಾಭ್ಯಾಂ	ಅಸ್ಮಾಭಿ:
ನನ್ನಿಂದ	ನಮ್ಮಿಬ್ಬರಿಂದ	ನಮ್ಮಿಂದ
मह्यं, मे	**आवाभ्यां, नौ**	**अस्मभ्यं, नः**
ಮಹ್ಯಂ, ಮೇ	ಆವಾಭ್ಯಾಂ, ನೌ	ಅಸ್ಮಭ್ಯಂ, ನ:
ನನಗೋಸ್ಕರ	ನಮ್ಮಿಬ್ಬರಿಗೋಸ್ಕರ	ನಮಗೋಸ್ಕರ
मत्	**आवाभ्यां**	**अस्मत्**
ಮತ್	ಆವಾಭ್ಯಾಂ	ಅಸ್ಮತ್
ನನ್ನ ದೆಸೆಯಿಂದ	ನಮ್ಮಿಬ್ಬರ ದೆಸೆಯಿಂದ	ನಮ್ಮ ದೆಸೆಯಿಂದ
मम, मे	**आवयोः, नौ**	**अस्माकं, नः**
ಮಮ, ಮೇ	ಆವಯೋ: ನೌ	ಅಸ್ಮಾಕಂ, ನ:
ನನ್ನ, ನನಗೆ	ನಮ್ಮಿಬ್ಬರ, ನಮ್ಮಿಬ್ಬರಿಗೆ	ನಮ್ಮ, ನಮಗೆ
मयि	**आवयोः**	**अस्मासु**
ಮಯಿ	ಆವಯೋ:	ಅಸ್ಮಾಸು
ನನ್ನಲ್ಲಿ	ನಮ್ಮಿಬ್ಬರಲ್ಲಿ	ನಮ್ಮಲ್ಲಿ

ಗಮನಿಸಿ—ಮೇಲೆ ಹೇಳಲ್ಪಟ್ಟ ಶಬ್ದರೂಪಗಳನ್ನು ಪ್ರತಿಯೊಬ್ಬ ಸಂಸ್ಕೃತ ವಿದ್ಯಾರ್ಥಿಯೂ ಕಂಠಪಾಠ ಮಾಡಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

दकारान्तः (त्रिषु लिंगेषु समानः) 'युष्मद्' शब्दः
ದಕಾರಾಂತಃ (ತ್ರಿಷು ಲಿಂಗೇಷು ಸಮಾನಃ 'ಯುಷ್ಮದ್' ಶಬ್ದಃ)

त्वं	**युवां**	**यूयं**
ತ್ವಂ	ಯುವಾಂ	ಯೂಯಂ
ನೀನು	ನೀವಿಬ್ಬರು	ನೀವು
त्वां , त्वा	**युवां , वां**	**युष्मान् , वः**
ತ್ವಾಂ, ತ್ವಾ	ಯುವಾಂ, ವಾಂ	ಯುಷ್ಮಾನ್, ವಃ
ನಿನ್ನನ್ನು	ನಿಮ್ಮಿಬ್ಬರನ್ನು	ನಿಮ್ಮನ್ನು
त्वया	**युवाभ्यां**	**युष्माभिः**
ತ್ವಯಾ	ಯುವಾಭ್ಯಾಂ	ಯುಷ್ಮಾಭಿಃ
ನಿನ್ನಿಂದ	ನಿಮ್ಮಿಬ್ಬರಿಂದ	ನಿಮ್ಮಿಂದ
तुभ्यं ,	**युवाभ्यां, वां**	**युष्मभ्यं , वः**
ತುಭ್ಯಂ, ತೇ	ಯುವಾಭ್ಯಾಂ. ವಾಂ	ಯುಷ್ಮಭ್ಯಂ, ವಃ
ನಿನಗೋಸ್ಕರ	ನಿಮ್ಮಿಬ್ಬರಿಗೋಸ್ಕರ	ನಿಮ್ಮಗೋಸ್ಕರ
त्वत्	**युवाभ्यां**	**युष्मत्**
ತ್ವತ್	ಯುವಾಭ್ಯಾಂ	ಯುಷ್ಮತ್
ನಿನ್ನದೆಸೆಯಿಂದ	ನಿಮ್ಮಿಬ್ಬರ ದೆಸೆಯಿಂದ	ನಿಮ್ಮ ದೆಸೆಯಿಂದ
तव . ते	**युवयोः , वां**	**युष्माकं, वः**
ತವ, ತೇ	ಯುವಯೋಃ, ವಾಂ	ಯುಷ್ಮಾಕಂ, ವಃ
ನಿನ್ನ, ನಿನಗೆ	ನಿಮ್ಮಿಬ್ಬರ,ನಿಮ್ಮಿಬ್ಬರಿಗೆ	ನಿಮ್ಮ, ನಿಮಗೆ
त्वयि	**युवयोः**	**युष्मासु**
ತ್ವಯಿ	ಯುವಯೋಃ	ಯುಷ್ಮಾಸು
ನಿನ್ನಲ್ಲಿ	ನಿಮ್ಮಿಬ್ಬರಲ್ಲಿ	ನಿಮ್ಮಲ್ಲಿ

ಗಮನಿಸಿ—ಮೇಲೆ ಹೇಳಿದ ಶಬ್ದವನ್ನು ಕೂಡ ಕಂಠಪಾಠ ಮಾಡಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

दकारान्तः पुंलिंगः 'तद्' शब्दः
ದಕಾರಾಂತಃ ಪುಂಲಿಂಗಃ 'ತದ್' ಶಬ್ದಃ

सः	तौ	ते
ಸಃ	ತೌ	ತೇ
ಅವನು	ಅವರಿಬ್ಬರು	ಅವರು
तं	तौ	तान्
ತಂ	ತೌ	ತಾನ್
ಅವನನ್ನು	ಅವರಿಬ್ಬರನ್ನು	ಅವರನ್ನು
तेन	ताभ्यां	तैः
ತೇನ	ತಾಭ್ಯಾಂ	ತೈಃ
ಅವನಿಂದ	ಅವರಿಬ್ಬರಿಂದ	ಅವರಿಂದ
तस्मै	ताभ्यां	तेभ्यः
ತಸ್ಮೈ	ತಾಭ್ಯಾಂ	ತೇಭ್ಯಃ
ಅವನಿಗೋಸ್ಕರ	ಅವರಿಬ್ಬರಿಗೋಸ್ಕರ	ಅವರಿಗೋಸ್ಕರ
तस्मात्	ताभ्यां	तेभ्यः
ತಸ್ಮಾತ್	ತಾಭ್ಯಾಂ	ತೇಭ್ಯಃ
ಅವನ ದೆಸೆಯಿಂದ	ಅವರಿಬ್ಬರ ದೆಸೆಯಿಂದ	ಅವರ ದೆಸೆಯಿಂದ
तस्य	तयोः	तेषाम्
ತಸ್ಯ	ತಯೋಃ	ತೇಷಾಂ
ಅವನ, ಅವನಿಗೆ	ಅವರಿಬ್ಬರ, ಅವರಿಬ್ಬರಿಗೆ	ಅವರ, ಅವರಿಗೆ
तस्मिन्	तयोः	तेषु
ತಸ್ಮಿನ್	ತಯೋಃ	ತೇಷು
ಅವನಲ್ಲಿ	ಅವರಿಬ್ಬರಲ್ಲಿ	ಅವರಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

दकारान्तः स्त्रीलिंगः 'तद्' शब्दः
ದಕಾರಾಂತಃ ಸ್ತ್ರೀಲಿಂಗಃ 'ತದ್' ಶಬ್ದಃ

सा	ते	ताः
ಸಾ	ತೇ	ತಾಃ
ಅವಳು	ಅವರಿಬ್ಬರು	ಅವರು
ताम्	ते	ताः
ತಾಂ	ತೇ	ತಾಃ
ಅವಳನ್ನು	ಅವರಿಬ್ಬರನ್ನು	ಅವರನ್ನು
तया	ताभ्यां	ताभिः
ತಯಾ	ತಾಭ್ಯಾಂ	ತಾಭಿಃ
ಅವಳಿಂದ	ಅವರಿಬ್ಬರಿಂದ	ಅವರಿಂದ
तस्यै	ताभ्यां	ताभ्यः
ತಸ್ಯೈ	ತಾಭ್ಯಾಂ	ತಾಭ್ಯಃ
ಅವಳಿಗೋಸ್ಕರ	ಅವರಿಬ್ಬರಿಗೋಸ್ಕರ	ಅವರಿಗೋಸ್ಕರ
तस्याः	ताभ्यां	ताभ्यः
ತಸ್ಯಾಃ	ತಾಭ್ಯಾಂ	ತಾಭ್ಯಃ
ಅವಳ ದೆಸೆಯಿಂದ	ಅವರಿಬ್ಬರ ದೆಸೆಯಿಂದ	ಅವರ ದೆಸೆಯಿಂದ
तस्याः	तयोः	तासाम्
ತಸ್ಯಾಃ	ತಯೋಃ	ತಾಸಾಂ
ಅವಳ, ಅವಳಿಗೆ	ಅವರಿಬ್ಬರ, ಅವರಿಬ್ಬರಿಗೆ	ಅವರ, ಅವರಿಗೆ
तस्यां	तयोः	तासु
ತಸ್ಯಾಂ	ತಯೋಃ	ತಾಸು
ಅವಳಲ್ಲಿ	ಅವರಿಬ್ಬರಲ್ಲಿ	ಅವರಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

दकारान्त नपुंसकलिंगः 'तद्' शब्दः
ದಕಾರಾಂತ ನಪುಂಸಕಲಿಂಗ: 'ತದ್' ಶಬ್ದ:

तत्	ते	तानि
ತತ್	ತೇ	ತಾನಿ
ಅದು	ಅದೆರಡು	ಅವುಗಳು
तत्	ते	तानि
ತತ್	ತೇ	ತಾನಿ
ಅದನ್ನು	ಅದೆರಡನ್ನು	ಅವುಗಳನ್ನು
तेन	ताभ्यां	तैः
ತೇನ	ತಾಭ್ಯಾಂ	ತೈಃ
ಅದರಿಂದ	ಅದೆರಡರಿಂದ	ಅವುಗಳಿಂದ
तस्मै	ताभ्यां	तेभ्यः
ತಸ್ಮೈ	ತಾಭ್ಯಾಂ	ತೇಭ್ಯಃ
ಅದಕ್ಕೋಸ್ಕರ	ಅದೆರಡರಗೋಸ್ಕರ	ಅವುಗಳಿಗೋಸ್ಕರ
तस्मात्	ताभ्यां	तेभ्यः
ತಸ್ಮಾತ್	ತಾಭ್ಯಾಂ	ತೇಭ್ಯಃ
ಅದರ ದೆಸೆಯಿಂದ	ಅದೆರಡರ ದೆಸೆಯಿಂದ	ಅವುಗಳ ದೆಸೆಯಿಂದ
तस्य	तयोः	तेषाम्
ತಸ್ಯ	ತಯೋಃ	ತೇಷಾಂ
ಅದರ, ಅದಕ್ಕೆ	ಅದೆರಡರ, ಅದೆರಡಕ್ಕೆ	ಅವುಗಳ, ಅವುಗಳಿಗೆ
तस्मिन्	तयोः	तेषु
ತಸ್ಮಿನ್	ತಯೋಃ	ತೇಷು
ಅದರಲ್ಲಿ	ಅದೆರಡರಲ್ಲಿ	ಅವುಗಳಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

मकारान्तः पुंलिंगः 'किम्' शब्दः

ವುಕಾರಾಂತ: ಪುಂಲಿಂಗ: 'ಕಿಂ' ಶಬ್ದ:

कः ಕ:	कौ ಕೌ	के ಕೇ
कम् ಕಂ	कौ ಕೌ	कान् ಕಾನ್
केन ಕೇನ	काभ्यां ಕಾಭ್ಯಾಂ	कैः ಕೈ:
कस्मै ಕಸ್ಮೈ	काभ्यां ಕಾಭ್ಯಾಂ	केभ्यः ಕೇಭ್ಯ:
कस्मात् ಕಸ್ಮಾತ್	काभ्यां ಕಾಭ್ಯಾಂ	केभ्यः ಕೇಭ್ಯ:
कस्य ಕಸ್ಯ	कयोः ಕಯೋ:	केषां ಕೇಷಾಂ
कस्मिन् ಕಸ್ಮಿನ್	कयोः ಕಯೋ:	केषु ಕೇಷು

1. ಯಾವಾತನು? 2. ಯಾವಾತನನ್ನು? 3. ಯಾವಾತನಿಂದ? 4. ಯಾವಾತನಿಗೋಸ್ಕರ? 5. ಯಾವಾತನ ದಸೆಯಿಂದ? 6. ಯಾವಾತನ?. ಯಾವಾತನಿಗೆ? 7. ಯಾವಾತನಲ್ಲಿ?

ಗವನಿಸಿ— ಮೇಲ್ಕಂಡ ಪುಂಲಿಂಗ 'ಕಿಂ' ಶಬ್ದರೂಪಗಳು ಪ್ರಶ್ನಾರ್ಥಕ ವಾಕ್ಯಗಳಲ್ಲಿ ಉಪಯೋಗಿಸಲ್ಪಡುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

मकारान्त स्त्रीलिंग: 'किम्' शब्द:

ಮಕಾರಾಂತ: ಸ್ತ್ರೀಲಿಂಗ: 'ಕಿಂ' ಶಬ್ದ:

का	के	का:
ಕಾ	ಕೇ	ಕಾ:
कां	के	का:
ಕಾಂ	ಕೇ	ಕಾ:
कया	काभ्यां	काभि:
ಕಯಾ	ಕಾಭ್ಯಾಂ	ಕಾಭಿ:
कस्यै	काभ्यां	काभ्य:
ಕಸ್ಯೈ	ಕಾಭ್ಯಾಂ	ಕಾಭ್ಯ:
कस्या:	काभ्यां	काभ्य:
ಕಸ್ಯಾ:	ಕಾಭ್ಯಾಂ	ಕಾಭ್ಯ:
कस्या:	कयो:	कासां
ಕಸ್ಯಾ:	ಕಯೋ:	ಕಾಸಾಂ
कस्यां	कयो:	कासु
ಕಸ್ಯಾಂ	ಕಯೋ:	ಕಾಸು

1. ಯಾವಾಕೆ? 2. ಯಾವಾಕೆಯನ್ನು? 3. ಯಾವಾಕೆಯಿಂದ? 4. ಯಾವಾಕೆ ಗೋಸ್ಕರ? 5. ಯಾವಾಕೆ ದೆಸೆಯಿಂದ? 6. ಯಾವಾಕೆಯ?, ಯಾವಾಕೆಯದು? 7. ಯಾವಾಕೆಯಲ್ಲಿ?

ಗಮನಿಸಿ—'ಕಿಂ' ಶಬ್ದದ ಸ್ತ್ರೀಲಿಂಗ ರೂಪಗಳು ಪ್ರಶ್ನಾರ್ಥಕ ವಾಕ್ಯಗಳಲ್ಲಿ ಉಪಯೋಗಿಸಲ್ಪಡುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

मकारान्त नपुंसकलिंगः 'किम' शब्दः

ಮಕಾರಾಂತ ನಪುಂಸಕಲಿಂಗ: 'ಕಿಂ' ಶಬ್ದಃ

किं ಕಿಂ	के ಕೇ	कानि ಕಾನಿ
किं ಕಿಂ	के ಕೇ	कानि ಕಾನಿ
केन ಕೇನ	काभ्यां ಕಾಭ್ಯಾಂ	कैः ಕೈಃ
कस्मै ಕಸ್ಮೈ	काभ्यां ಕಾಭ್ಯಾಂ	केभ्यः ಕೇಭ್ಯಃ
कस्मात् ಕಸ್ಮಾತ್	काभ्यां ಕಾಭ್ಯಾಂ	केभ्यः ಕೇಭ್ಯಃ
कस्य ಕಸ್ಯ	कयोः ಕಯೋಃ	केषां ಕೇಷಾಂ
कस्मिन् ಕಸ್ಮಿನ್	कयोः ಕಯೋಃ	केषु ಕೇಷು

ಏಕವಚನ ರೂಪಕ್ಕೆ ಅರ್ಥ—

1. ಯಾವದು? 2. ಯಾವದರನ್ನು? 3. ಯಾವದರಿಂದ? 4. ಯಾವದಕ್ಕೋಸ್ಕರ? 5. ಯಾವದರ ದೆಸೆಯಿಂದ? 6. ಯಾವದರ? ಯಾವದಕ್ಕೆ? 7. ಯಾವದರಲ್ಲಿ?

ಗಮನಿಸಿ—'ಕಿಂ' ಶಬ್ದದ ನಪುಂಸಕಲಿಂಗ ರೂಪಗಳು ಪ್ರಶ್ನಾರ್ಥಕ ವಾಕ್ಯಗಳಲ್ಲಿ ಉಪಯೋಗಿಸಲ್ಪಡುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನಿರ್ದಿಷ್ಟಾರ್ಥಕ ಸರ್ವನಾಮಗಳು

'ಕಿಮ್' ಶಬ್ದಕ್ಕೆ ಮೂರು ಲಿಂಗಗಳಲ್ಲಿಯು ಸರ್ವ ವಿಭಕ್ತಿಗಳಲ್ಲಿಯು ಚಿತ್, ಚನ, ಅಪಿ ಎಂಬ ಪ್ರತ್ಯಯಗಳನ್ನು ತುದಿಯಲ್ಲಿ ಸೇರಿಸಿ ಪ್ರಯೋಗಿಸುವದುಂಟು. ಇಂತಹ ಪದಗಳನ್ನು ಅನಿರ್ದಿಷ್ಟ ಸರ್ವನಾಮಗಳೆಂದು ಹೇಳುತ್ತಾರೆ.

पुंलिङ्गे — कः + चित् — कश्चित्
ಪುಂಲಿಂಗದಲ್ಲಿ— ಕಃ + ಚಿತ್ = ಕಶ್ಚಿತ್
कः + चन — कश्चन
ಕಃ + ಚನ = ಕಶ್ಚನ
कः + अपि — कोऽपि
ಕಃ + ಅಪಿ = ಕೋಽಪಿ
} ಒಬ್ಬಾನೊಬ್ಬನು

स्त्रीलिङ्गे — का + चित् — काचित्
ಸ್ತ್ರೀಲಿಂಗದಲ್ಲಿ— ಕಾ + ಚಿತ್ = ಕಾಚಿತ್
का + चन — काचन
ಕಾ + ಚನ = ಕಾಚನ
का + अपि — कापि
ಕಾ + ಅಪಿ = ಕಾಪಿ
} ಒಬ್ಬಾನೊಬ್ಬಳು

नपुंसकलिङ्गे — किं + चित् — किञ्चित्
ನಪುಂಸಕಲಿಂಗದಲ್ಲಿ- ಕಿಂ + ಚಿತ್ = ಕಿಂಚಿತ್
किं + चन — किञ्चन
ಕಿಂ + ಚನ = ಕಿಂಚನ
किं + अपि — किमपि
ಕಿಂ + ಅಪಿ = ಕಿಮಪಿ
} ಒಂದಾನೊಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಭಿನ್ನ ವಚನಗಳಲ್ಲಿ ಚಿತ್, ಚನ, ಅಪಿ ಎಂಬ ಪ್ರತ್ಯಯಗಳ ತುದಿಯಲ್ಲಿ ಸೇರಿದ 'ಕಿಮ್' ಶಬ್ದದ ರೂಗಪಳು

1.	कश्चित् ಕಶ್ಚಿತ್	कौचित् ಕೌಚಿತ್	केचित् ಕೇಚಿತ್
2.	कंचित् ಕಂಚಿತ್	कौचित् ಕೌಚಿತ್	कांश्चित् ಕಾಂಶ್ಚಿತ್
3.	केनचित् ಕೇನಚಿತ್	काभ्यांचित् ಕಾಭ್ಯಾಂಚಿತ್	कैश्चित् ಕೈಶ್ಚಿತ್
4.	कस्मैचित् ಕಸ್ಮೈಚಿತ್	काभ्यांचित् ಕಾಭ್ಯಾಂಚಿತ್	केभ्यश्चित् ಕೇಭ್ಯಶ್ಚಿತ್
5.	कस्माच्चित् ಕಸ್ಮಾಚ್ಚಿತ್	काभ्यांचित् ಕಾಭ್ಯಾಂಚಿತ್	केभ्यश्चित् ಕೇಭ್ಯಶ್ಚಿತ್
6.	कस्यचित् ಕಸ್ಯಚಿತ್	कयोश्चित् ಕಯೋಶ್ಚಿತ್	केषांचित् ಕೇಷಾಂಚಿತ್
7.	कस्मिंश्चित् ಕಸ್ಮಿಂಶ್ಚಿತ್	कयोश्चित् ಕಯೋಶ್ಚಿತ್	केषुचित् ಕೇಷುಚಿತ್

ಗವನಿಸಿ—1. 'ಕಿಮ್' ಶಬ್ದಕ್ಕೆ 'ಚನ' ಸೇರಿಸಿದರೆ ಕಶ್ಚನ, ಕೌಚನ, ಕೇಚನ, ಕಂಚನ ಮೊದಲಾದ ರೂಪಗಳು, 'ಅಪಿ' ಸೇರಿಸಿದರೆ ಕೋಽಪಿ, ಕಾವಪಿ, ಕೇಽಪಿ, ಕಮಪಿ ಮೊದಲಾದ ರೂಪಗಳು, ಪುಂಲಿಂಗದಲ್ಲಿ ಅಗುತ್ತದೆ.

2. ಸ್ತ್ರೀಲಿಂಗದಲ್ಲಿ ಕಾಚನ, ಕೇಚನ, ಕಾಶ್ಚನ, ಕಾಂಚನ ಮೊದಲಾದ ರೂಪಗಳು, ಕಾಪಿ, ಕೇಽಪಿ, ಕಾಮಪಿ ಮೊದಲಾದ ರೂಪಗಳು ಆಗುತ್ತವೆ.

3. ನಪುಂಸಕ ಲಿಂಗದಲ್ಲಿ ಕಿಂಚನ, ಕೇಚನ, ಕಾನಿಚನ ಮೊದಲಾದ ರೂಪಗಳು, ಕಿಮಪಿ, ಕೇಽಪಿ, ಕಾನ್ಯಪಿ ಮೊದಲಾದ ರೂಪಗಳು ಅಗುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪದೇ ಪದೇ ಉಪಯೋಗಿಸಲ್ಪಡುವ

ಕೆಲವು ಅವ್ಯಯಗಳು

अतः
ಅತಃ ಆದುದರಿಂದ

इति, एवम्
ಇತಿ, ಏವಂ ಎಂದು, ಹೀಗೆ

इत्थम्
ಇತ್ಥಂ ಈ ಪ್ರಕಾರ

इव
ಇವ ಅಂತೆ

एव
ಏವ ಕೇವಲ, ಮಾತ್ರ

किन्तु
ಕಿಂತು ಆದರೆ

च
ಚ ಮತ್ತು

ततः
ತತಃ ಅನಂತರ

तथा
ತಥಾ ಆರೀತಿಯಾಗಿ

पुनः
ಪುನಃ ಮತ್ತೊಮ್ಮೆ

पुरा
ಪುರಾ ಪೂರ್ವಕಾಲದಲ್ಲಿ

वा
ವಾ ಅಥವಾ

वृथा
ವೃಥಾ ವ್ಯರ್ಥವಾಗಿ

सुष्ठु
ಸುಷ್ಠು ಚೆನ್ನಾಗಿ

इह
ಇಹ ಇಲ್ಲಿ, ಈ ಲೋಕದಲ್ಲಿ

अमुत्र
ಅಮುತ್ರ ಪರಲೋಕದಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಕ್ಯಗಳು

मम पिता पत्रं अलिखत् । अतः ग्रामं गच्छामि ।
ಮಮ ಪಿತಾ ಪತ್ರಂ ಅಲಿಖತ್: ಅತ: ಗ್ರಾಮಂ ಗಚ್ಛಾಮಿ
ನನ್ನ ತಂದೆಯು ಪತ್ರ ಬರೆದನು: ಆದುದರಿಂದ ಗ್ರಾಮಕ್ಕೆ ಹೋಗುತ್ತಿದ್ದೇನೆ

सः एवं (इति) अवदत् ।
ಸ: ಏವಂ (ಇತಿ) ಅವದತ್ ಅವನು ಹೀಗೆ ಹೇಳಿದನು

इत्थं तस्मै कथय ।
ಇತ್ಥಂ ತಸ್ಮೈ ಕಥಯ ಈ ಪ್ರಕಾರ ಅವನಿಗೆ ಹೇಳು

मुखं चन्द्रः इव भाति ।
ಮುಖಂ ಚಂದ್ರ: ಇವ ಭಾತಿ
ಮುಖವು ಚಂದ್ರನಂತೆ ಪ್ರಕಾಶಿಸುತ್ತಿದೆ

पार्थः एव धनुर्धरः ।
ಪಾರ್ಥ ಏವ ಧನುರ್ಧರ:
ಅರ್ಜುನ ನೊಬ್ಬನೇ ಬಿಲ್ಲನ್ನು ಧರಿಸಿದವನು

सः धनवान् । किन्तु पुत्रहीनः ।
ಸ: ಧನವಾನ್ ಕಿಂತು ಪುತ್ರಹೀನ:
ಅವನು ಹಣವಂತನೂ ಆದರೇ ಮಕ್ಕಳಿಲ್ಲದವನು

ततः रामः वनं अगच्छत् ।
ತತ: ರಾಮ: ವನಂ ಅಗಚ್ಛತ್
ಆದುದರಿಂದ ರಾಮನು ಕಾಡಿಗಿ ಹೋದನು.

Sri Vidyabharathi Book Centre, Sringeri

CC-O. In Public Domain. Digitized by eGangotri

तथा कथयित्वा सः विरराम ।
ತಥಾ ಕಥಯಿತ್ವಾ ಸಃ ವಿರರಾಮ
ಆರೀತಿ ಹೇಳಿ ಅವನು ಸುಮ್ಮನೆ ಯಿದ್ದನು

पुनः त्वां द्रक्ष्यामि ।
ಪುನಃ ತ್ವಾಂ ದ್ರಕ್ಷ್ಯಾಮಿ
ಮತ್ತು ನಿನ್ನನ್ನು ನೋಡುವೆನು

पुरा नलः नाम राजा अभवत् ।
ಪುರಾ ನಲಃ ನಾಮ ರಾಜಾ ಅಭವತ್
ಪೂರ್ವಕಾಲದಲ್ಲಿ ನಲನೆಂಬ ರಾಜನಿದ್ದನು

धनं विद्यां वा आर्जय ।
ಧನಂ ವಿದ್ಯಾಂ ವಾ ಆರ್ಜಯ
ಹಣವನ್ನು ಅಥವಾ ವಿದ್ಯೆಯನ್ನು ಗಳಿಸು

वृथा कालं मा यापय ।
ವೃಥಾ ಕಾಲಂ ಮಾ ಯಾಪಯ
ವ್ಯರ್ಥವಾಗಿ ಕಾಲವನ್ನು ಕಳೆಯಬೇಡ

सुष्ठु पाठं पठसि ।
ಸುಷ್ಠು ಪಾಠಂ ಪಠಸಿ
ಚನ್ನಾಗಿ ಪಾಠವನ್ನು ಓದುತ್ತಿರುವಿ

इह लोके सुखं नास्ति ।
ಇಹ ಲೋಕೆ ಸುಖಂ ನಾಸ್ತಿ
ಈ ಲೋಕದಲ್ಲಿ ಸುಖವಿಲ್ಲ.

Sri Vidyabharathi Book Centre, Sringeri

'ತ್ರಲ್' ಪ್ರತ್ಯಯಾಂತ ಅವ್ಯಯಗಳು

CC-O. In Public Domain. Digitized by eGangotri

अत्र
ಅತ್ರ ಇಲ್ಲಿ

तत्र
ತತ್ರ ಅಲ್ಲಿ

कुत्र
ಕುತ್ರ ಎಲ್ಲಿ?

सर्वत्र
ಸರ್ವತ್ರ ಎಲ್ಲಕಡೆಯು

बहुत्र
ಬಹುತ್ರ ಬಹು ಸ್ಥಳಗಳಲ್ಲಿ

एकत्र
ಏಕತ್ರ ಒಂದುಕಡೆ

यत्र (तत्र)
ಯತ್ರ (ತತ್ರ) ಎಲ್ಲಿಯೋ (ಅಲ್ಲಿ)

अन्यत्र
ಅನ್ಯತ್ರ ಮತ್ತೊಂದುಕಡೆ

परत्र
ಪರತ್ರ ಪರಲೋಕದಲ್ಲಿ

ಗವನಿಸಿ—ಮೇಲ್ಕಂಡ ಅವ್ಯಯಗಳು ಸ್ಥಳವನ್ನು ಅಲ್ಲದೇ ಕಾಲವನ್ನು ನಿರ್ದೇಶಿಸುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಕ್ಯಗಳು

अत्र त्वं आगच्छ

ಅತ್ರ ತ್ವಂ ಆಗಚ್ಛ

ಇಲ್ಲಿ ನೀನು ಬಾ!

तत्र अहं गच्छामि

ತತ್ರ ಅಹಂ ಗಚ್ಛಾಮಿ

ಅಲ್ಲಿ ನಾನು ಹೋಗುತ್ತೇನೆ

सः कुत्र पठति ?

ಸಃ ಕುತ್ರ ಪಠತಿ?

ಅವನು ಎಲ್ಲಿ ಓದುತ್ತಾನೆ?

सर्वत्र वर्षाः पतन्ति

ಸರ್ವತ್ರ ವರ್ಷಾಃ ಪತಂತಿ

ಎಲ್ಲಕಡೆಯು ಮಳೆಗಳು ಬೀಳುತ್ತಿವೆ

त्वं बहुत्र दृष्टः

ತ್ವಂ ಬಹುತ್ರ ದೃಷ್ಟಃ

ನೀನು ಬಹಳಕಡೆ ನೋಡಲ್ಪಟ್ಟಿರುವಿ

Sri Vidyabharathi Book Centre, Sringeri

CC-O. In Public Domain. Digitized by eGangotri

ते एकत्र संमिलिता :
ತೇ ಏಕತ್ರ ಸಂಮಿಲಿತಾ:
ಅವರು ಒಂದುಕಡೆ ಸೇರಿರುತ್ತಾರೆ

यत्र धेनु : गच्छति तत्र वत्स : अनुसरति
ಯತ್ರ ಧೇನು: ಗಚ್ಛತಿ ತತ್ರ ವತ್ಸ: ಅನುಸರತಿ
ಎಲ್ಲಿ ಹಸು ಹೋಗುತ್ತದೋ ಅಲ್ಲಿ ಕರು ಹಿಂಬಾಲಿಸುತ್ತಿದೆ.

अन्यत्र तं अहं अपश्यम्
ಅನ್ಯತ್ರ ತಂ ಅಹಂ ಅಪಶ್ಯಂ
ಮತ್ತೊಂದುಕಡೆ ಅವನನ್ನು ನಾನು ನೋಡಿದೆನು

अमुत्र शाश्वतं सुखं भवति
ಅಮುತ್ರ ಶಾಶ್ವತಂ ಸುಖಂ ಭವತಿ
ಪರಲೋಕದಲ್ಲಿ ಶಾಶ್ವತ ಸುಖ ವುಂಟು

एकत्र पुस्तकं अस्ति
ಏಕತ್ರ ಪುಸ್ತಕಂ ಅಸ್ತಿ
ಒಂದೊಕಡೆ ಪುಸ್ತಕ ಇದೆ

अन्यत्र बाल : स्वपिति
ಅನ್ಯತ್ರ ಬಾಲಃ ಸ್ವಪಿತಿ
ಮತ್ತೊಂದುಕಡೆ ಹುಡುಗನು ನಿದ್ದೆಮಾಡುತ್ತಿದ್ದಾನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಲ್ಕನೆಯ ಭಾಗ

(ಅಭ್ಯಾಸಗಳು)

ಈ ನಾಲ್ಕನೆಯ ಭಾಗದ ಉದ್ದೇಶ್ಯವೇನೆಂದರೆ ಇದರಲ್ಲಿನ ಅಭ್ಯಾಸಗಳಲ್ಲಿ ಸಂಸ್ಕೃತ ವಾಕ್ಯಗಳನ್ನು ತಾವಾಗಿ ಓದುವದಕ್ಕೆ ಮತ್ತು ಅನುವದಿಸುವದಕ್ಕೆ ಶಕ್ತಿಯನ್ನು ಪರೀಕ್ಷಿಸಲು ಕೊಡಲ್ಪಟ್ಟವು.

ಈ ಭಾಗದಲ್ಲಿ ಸಂಸ್ಕೃತ ಪದಗಳಿಗೆ ಕನ್ನಡ ಲಿಪಿಯ ಪದಗಳು ಕೊಡಲ್ಪಡಲಿಲ್ಲ. ಆದುದರಿಂದ ಪಾಠಕರು ತಾವಾಗಿ ಸಂಸ್ಕೃತ ಪದಗಳನ್ನು ಓದಬೇಕು.

ಕೆಲವ ಅಭ್ಯಾಸಗಳು (1) ಕತೆಗಳು (2) ವ್ಯಾಸಗಳು (3) ಸಂಭಾಷಣೆ (4) ಅನುವಾದಗಳಿಗೆ ಅಭ್ಯಾಸಗಳು ಕೊಡಲ್ಪಟ್ಟವೆ.

ಪಾಠಕರು ಇದುವರಿಗು ಕೊಡಲ್ಪಟ್ಟ ಅಭ್ಯಾಸಗಳ ಅನುಭವದಿಂದ ಈ ಭಾಗದಲ್ಲಿ ಕನ್ನಡ ವಾಕ್ಯಗಳಿಗೆ ಸಂಸ್ಕೃತ ಅನುವಾದವನ್ನು, ಮತ್ತು ಸಂಸ್ಕೃತ ವಾಕ್ಯಗಳಿಗೆ ಕನ್ನಡ ಅನುವಾದವನ್ನು ಮಾಡಬೇಕು.

ಈ ಪುಸ್ತಕದ ಕೊನೆಯಲ್ಲಿ ಕೊಡಲ್ಪಟ್ಟ ಶಬ್ದಾನುಕ್ರಮಣಿಕೆ ಅನುವಾದ ಮಾಡಲು ಉಪಯೋಗಪಡುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಾಸಗಳು

धेनुः

1. धेनुः ग्राम्यः पशुः ।
2. धेनुः मधुरं दुग्धं ददाति ।
3. सा धान्यं, तृणं, घासं च भक्षयति ।
4. धेनोः दुग्धं दधि भवति ।
5. दधि मथित्वा तक्रं साधयन्ति ।
6. दध्नः नवनीतं जायते ।
7. नवनीतात् घृतं भवति ।
8. धेनोः क्षीरं, दधि, तक्रं, घृतं च पथ्यानि भवन्ति ।
9. भारतदेशे जनैः धेनुः पूज्यते ।
10. धेनोः द्वे शृङ्गे वर्तेते ।
11. तस्याः एकं दीर्घं पुच्छं अस्ति ।
12. तस्याः चत्वारः पादाः सन्ति ।
13. धेनवः शुक्लाः, श्यामाः, रक्ताश्च भवन्ति ।
14. शिशवः रुग्णाश्च धेनुदुग्धं पिबन्ति ।
15. धेनोः परिपालनं क्षेमाय भवति ।

ಗಮನಿಸಿ—107, 109, 111 ಪುಟಗಳಲ್ಲಿರುವ ಸಂಸ್ಕೃತ ವಾಕ್ಯಗಳನ್ನು ಕನ್ನಡದಲ್ಲಿ ಸ್ವಯವಾಗಿ ಅನುವಾದಮಾಡಿ, ಈ ಪುಟಗಳಿಗೆ ಪಕ್ಕ ಪುಟಗಳನ್ನು ನೋಡಿ ಹೋಲಿಸಿಕೊಳ್ಳಿರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಸು

1. ಹಸು ಗ್ರಾಮದಲ್ಲಿರುವ ಪಶುವು

2. ಹಸು ಸಿಹಿಯಾದ ಹಾಲನ್ನು ಕೊಡುತ್ತದೆ.

3. ಅದು ಧಾನ್ಯವನ್ನು, ಒಣಹುಲ್ಲನ್ನು, ಹಸಿ ಹುಲ್ಲನ್ನು ಕೂಡ ತಿನ್ನುತ್ತಿದೆ

4. ಹಸುವಿನ ಹಾಲು ಮೊಸರು ಆಗುತ್ತದೆ

5. ಮೊಸರನ್ನು ಕಡಿದು ಮಜ್ಜಿಗೆಯನ್ನು ಮಾಡಿಕೊಳ್ಳುತ್ತಾರೆ

6. ಮೊಸರಿನ ದೆಸೆಯಿಂದ ಬೆಣ್ಣೆಯು ಆಗುತ್ತದೆ

7. ಬೆಣ್ಣೆಯ ದೆಸೆಯಿಂದ ತುಪ್ಪ ಆಗುತ್ತದೆ

8. ಹಸುವಿನಹಾಲು, ಮೊಸರು, ಮಜ್ಜಿಗೆ, ತುಪ್ಪವು ಕೂಡ ಪಥ್ಯವಾಗಿ ಯಿರುತ್ತವೆ

9. ಭಾರತದೇಶದಲ್ಲಿ ಜನರಿಂದ ಹಸು ಪೂಜಿಸಲ್ಪಡುತ್ತ

10. ಹಸುವಿಗೆ ಎರಡು ಕೋಡುಗಳು ಯಿರುತ್ತವೆ

11. ಅದಕ್ಕೆ ಒಂದು ಉದ್ದವಾದ ಬಾಲ ಯಿರುತ್ತದೆ

12. ಅದಕ್ಕೆ ನಾಲ್ಕು ಕಾಲುಗಳು ಯಿರುತ್ತವೆ

13. ಹಸುಗಳು ಬೆಳ್ಳಗೂ, ಕಪ್ಪಗೂ, ಕೆಂಪಗೂ ಯಿರುತ್ತವೆ

14. ಎಳೆ ಮಕ್ಕಳು ಮತ್ತು ರೋಗಿಗಳು ಹಸುವಿನ ಹಾಲು ಕುಡಿಯುವರು

15. ಹಸುವಿನ ರ[illegible]ಗುತ್ತದೆ

Sri Vidyabharathi Book Centre, Sringeri

F-8

CC-O. In Public Domain. Digitized by eGangotri

ಕಥೆಗಳು

I. मण्डूकः मूषिकश्च

1. कस्मिंश्चित् तटाके कोऽपि मण्डूकः अवर्तत।
2. तस्य तटाकस्य तीरे कश्चन मूषिकः वसति स्म।
3. कालक्रमेण मण्डूकः मूषिकश्च मित्रे अभवताम्।
4. कदाचित् मूषकः तटाके प्लवनं ऐच्छत्।
5. किन्तु सः प्लवनं न जानाति स्म।
6. अतः तौ आलोच्य रज्ज्वा स्वपादौ अबध्नीताम्।
7. मण्डूकः जले उत्प्लुत्य इतस्ततः प्लवते स्म।
8 तत्पादबद्धः मूषकः अपि तेन सह जले अचरत्।
9. इत्थं तौ चिराय जले प्लवनसुखं अन्वभवताम्।
10. तस्मिन् समये कश्चित् गृध्रः आकाशे डयते स्म।
11. सः जलोपरि प्लवमानं मूषकं अपश्यत्।
12. सः झटिति स्वपादाभ्यां तं जग्राह।
13. हन्त! मूषिकेन सह तत्पादबद्धः मण्डूकोऽपि लम्बते स्म।
14. गृध्रः मण्डूकमूषिकौ प्राप्य तुष्टः अभक्षयत्।
15. स्थलवासी मूषिकः जलवासिना मण्डूकेन सह मैत्रीं अकरोत्।
16. तेन उभावपि महत् मृत्युं प्राप्तवन्तौ।
17. अतः समयोरेव मैत्री शोभते।

Sri Vidyabharathi Book Centre, Sringeri

CC-O. In Public Domain. Digitized by eGangotri

ಕತೆಗಳು

1. ಕಪ್ಪೆ ಮತ್ತು ಇಲಿ

1. ಒಂದಾನೊಂದು ಕೆರೆಯಲ್ಲಿ ಒಂದು ಕಪ್ಪೆ ಯಿತ್ತು
2. ಆ ಕೆರೆಯ ಕಟ್ಟೆಯ ಮೇಲೆ ಒಂದು ಇಲಿ ವಾಸಮಾಡುತ್ತಿತ್ತು
3. ಕಾಲಕ್ರಮದಲ್ಲಿ ಕಪ್ಪೆ ಮತ್ತು ಇಲಿಯು ಮಿತ್ರರು ಆದವು
4. ಒಂದಾನೊಂದು ಸಮಯದಲ್ಲಿ ಇಲಿಯು ಕೆರೆಯಲ್ಲಿ ಈಜಲು ಬಯಸಿತು
5. ಆದರೇ ಅದು ಈಜನ್ನು ತಿಳಿಯಲಾರದು
6. ಆದುದರಿಂದ ಅವೆರಡು ಆಲೋಚಿಸಿ ಹಗ್ಗದಿಂದ ತಮ್ಮ ಕಾಲು ಗಳನ್ನು ಕಟ್ಟಿಕೊಂದವು
7. ಕಪ್ಪೆ ನೀರಿನಲ್ಲಿ ಹಾರಿ ಅತ್ತಿತ್ತ ಈಜುತ್ತಿತ್ತು
8. ಅದರ ಕಾಲಲ್ಲಿ ಕಟ್ಟಲ್ಪಟ್ಟ ಇಲಿಯೂ ಅದರಜೊತೆಯಲ್ಲಿ ನೀರಲ್ಲಿ ತಿರಿಗಿತು
9. ಈ ರೀತಿ ಅವೆರಡು ಬಹಳಹೊತ್ತು ನೀರಲ್ಲಿ ಈಜಿನ ಸುಖವನ್ನು ಅನುಭವಿಸಿದವು
10. ಆ ಸಮಯದಲ್ಲಿ ಒಂದು ಗಿಡುಗ ಆಕಾಶದಲ್ಲಿ ಹಾರುತ್ತಿತ್ತು
11. ಅದು ನೀರಿನಮೇಲೆ ಈಜುತ್ತಿದ್ದ ಇಲಿಯನ್ನು ನೋಡಿತು
12. ಅದು ಬೇಗನೆ ತನ್ನ ಕಾಲುಗಳಿಂದ ಆ ಇಲಿಯನ್ನು ಹಿಡಿದಿತು
13. ಪಾಪ! ಇಲಿಯು ಜೊತೆಯಲ್ಲಿ ಅದರ ಕಾಲಿನಲ್ಲಿ ಕಟ್ಟಲ್ಪಟ್ಟ ಕಪ್ಪೆಯೂ ಜೊತಾಡುತ್ತಿತ್ತು
14. ಗಿಡುಗ ಕಪ್ಪೆಯನ್ನು ಮತ್ತು ಇಲಿಯನ್ನು ತೆಗೆದುಕೊಂಡು ಸಂತೋಷಪಟ್ಟು ತಿಂದಿತು
15. ನೆಲದಮೇಲೆ ವಾಸಮಾಡುವ ಇಲಿ ನೀರಲ್ಲಿ ವಸಿಸುವ ಕಪ್ಪೆಯಜೊತೆ ಸ್ನೇಹವನ್ನು ಮಾಡಿತು
16. ಅದರಿಂದ ಎರಡೂ ಜೊತೆಯಾಗಿಯೇ ಮರಣ ಹೊಂದಿದವು
17. ಆದುದರಿಂದ ಸಮಾನರಾಗಿ ಯಿರುವರಿಗೇ ಸ್ನೇಹವು ಶೋಭಿಸುತ್ತದೆ

Sri Vidyabharathi Book Centre, Sringeri

CC-O. In Public Domain. Digitized by eGangotri

2. संघे शक्तिः

1. कस्यचित् वृद्धस्य चत्वारः पुत्राः आसन् ।
2. ते सदा परस्परं कलहायमाना आसन् ।
3. बहुधा प्रयत्नमानोऽपि सः वृद्धः तेषु परस्परप्रीतिं कल्पयितुं अशक्तः अभवत् ।
4. कदाचित् सः वृद्धः मरणतल्पे अवर्तत ।
5. पुत्राः सर्वे तत्तल्पस्य परिसरे आसन् ।
6. वृद्धः तेषु कंचित् आहूय 'काष्ठबन्धं एकं आनय' इति आज्ञापयत् ।
7. सः तथैव काष्ठबन्धं आहरत् ।
8. वृद्धः पुत्रेषु एकैकं आहूय, "काष्ठबन्धं एनं भञ्जय" इत्युवाच ।
9. किन्तु, कोपि तं भंजयितुं न अशक्नोत् ।
10. ततः सः वृद्धः, 'तं काष्ठबन्धं उन्मुच्य एकैकं काष्ठं भंजयत' इत्यवोचत् ।
11. तेषु एकैकोपि एकैकं काष्ठमादाय क्षिप्रं, विना श्रमेण अभंजयत् ।
12. तदा वृद्धः अवदत्, "पुत्राः! एकैकं काष्ठं युष्माभिः सुलभतया भग्नम् । न काष्ठबन्धः ।
13. अतः यूय सदा सङ्घीभवत । तदा न कोऽपि युष्मान् बाधेत" इति ।
14. एवं सङ्घे शक्तिं तेभ्यः अबोधयत् ।

Sri Vidyadharathi Book Centre, Sringeri

CC-O. In Public Domain. Digitized by eGangotri

ಸಂಘದಲ್ಲಿ ಶಕ್ತಿ

1. ಒಬ್ಬ ಮುದುಕನಿಗೆ ನಾಲ್ಕು ಜನ ಮಕ್ಕಳಿದ್ದರು
2. ಅವರು ಯಾವಾಗಲೂ ಪರಸ್ಪರ ಜಗಳವಾಡುತ್ತ ಯಿದ್ದರು
3. ಅನೇಕವಿಧವಾಗಿ ಪ್ರಯತ್ನಮಾಡಿಯೂ ಆ ಮುದುಕನು ಅವರಲ್ಲಿ ಪರಸ್ಪರ ಪ್ರೀತಿಯನ್ನುಂಟುಮಾಡಲು ಅಶಕ್ತನಾದನು
4. ಒಂದಾನೊಂದು ಸಮಯದಲ್ಲಿ ಆ ಮುದುಕ ಮರಣಶಯ್ಯೆಯಲ್ಲಿದ್ದನು
5. ಮಕ್ಕಳೆಲ್ಲರು ಅವನ ಹಾಸಿಗೆಯ ಹತ್ತಿರ ಇದ್ದರು
6. ಮುದುಕ ಅವರಲ್ಲಿ ಒಬ್ಬ ಪುತ್ರನನ್ನು ಕರೆದು 'ಒಂದು ಕಟ್ಟಿಗೆ ಹೊರೆಯನ್ನು ತೆಗೆದುಕೊಂಡುಬಾ' ಎಂದು ಆಜ್ಞಾಪಿಸಿದನು
7. ಅವನು ಅದೇರೀತಿ ಒಂದು ಕಟ್ಟಿಗೆ ಹೊರೆಯನ್ನು ತಂದನು
8. ಮುದುಕ ಪುತ್ರರಲ್ಲಿ ಒಬ್ಬನೊಬ್ಬನನ್ನಾಗಿ ಕರೆದು, "ಈ ಕಟ್ಟಿಗೆ ಹೊರೆಯನ್ನು ಮುರಿ" ಎಂದು ಹೇಳಿದನು
9. ಆದರೆ ಯಾವ ಒಬ್ಬನೂ ಆ ಹೊರೆಯನ್ನು ಮುರಿಯಲು ಶಕ್ತನಾಗಲಿಲ್ಲ
10. ಅನಂತರ ಆ ಮುದುಕ 'ಆ ಕಟ್ಟಿಗೆ ಹೊರೆಯನ್ನು ಬಿಚ್ಚಿ ಒಂದೊಂದು ಕಟ್ಟಿಗೆಯನ್ನಾಗಿ ಮುರಿಯಿರಿ' ಎಂದು ಹೇಳಿದನು
11. ಆ ಕಟ್ಟಿಗೆಗಳಲ್ಲಿ ಒಬ್ಬೊಬ್ಬನೂ ಒಂದೊಂದು ಕಟ್ಟಿಗೆಯನ್ನು ತೆಗೆದುಕೊಂಡು ಬೇಗನೆ ಶ್ರಮವಿಲ್ಲದೆ ಮುರಿದನು
12. ಆಗ ಮುದುಕ ಹೇಳಿದನು, "ಎಲೈ ಪುತ್ರರೇ! ಒಂದೊಂದು ಕಟ್ಟಿಗೆ ನಿಮ್ಮಿಂದ ಸುಲಭವಾಗಿ ಮುರಿಯಲ್ಪಟ್ಟಿತು, ಆಗಲಿ ಕಟ್ಟಿಗೆ ಹೊರೆಯು ಮುರಿಯಲ್ಪಡಲಿಲ್ಲ
13. ಆದುದರಿಂದ ನೀವು ಯಾವಾಗಲೂ ಸಂಘೀಭಾವದಿಂದಯಿರಿ. ಆಗ ಯಾವನೂ ನಿಮ್ಮನ್ನು ಬಾಧಿಸಲಾರನು" ಎಂದ.
14. ಹೀಗೆ ಸಂಘದಲ್ಲಿ ಶಕ್ತಿ ಇರುವುದೆಂದು ಅವರಿಗೆ ಬೋಧಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

सम्भाषणम् (अङ्गानि उद्दिश्य)

प्रश्नः : इदं किम् ?

ಪ್ರಶ್ನೆ : ಇದು ಏನು ?

उत्तरम् : इदं मम शरीरम् ।

ಉತ್ತರ : ಇದು ನನ್ನ ಶರೀರವು

प्र : शरीरस्य भागाः के

ಪ್ರ : ಶರೀರದ ಭಾಗಗಳು ಯಾವವು ?

उ : शरीरस्य भागाः शिरः, कण्ठः, उरः, उदरं, हस्तौ, पादौ, अङ्गुलयः इत्यादयः

ಉ : ಶರೀರದ ಭಾಗಗಳು ತಲೆ, ಕಂಠ, ಎದೆ, ಹೊಟ್ಟೆ, ಕೈಗಳು, ಕಾಲುಗಳು, ಬೆರಳುಗಳು ಮೊದಲಾದವುಗಳು.

प्र : तव शिरसि किं किं वर्तते ?

ಪ್ರ : ನಿನ್ನ ತಲೆಯಲ್ಲಿ ಯಾವ ಯಾವ ಭಾಗವಿದೆ ?

उ : मम शिरसि द्वे नेत्रे, द्वौ कर्णौ, एका नासिका, मुखं, जिह्वा, दन्ताः एवमादयः वर्तन्ते ।

ಉ : ನನ್ನ ತಲೆಯಲ್ಲಿ ಎರಡು ಕಣ್ಣುಗಳು, ಎರಡು ಕಿವಿಗಳು, ಒಂದು ಮೂಗು, ಬಾಯಿ, ನಾಲಿಗೆ, ಹಲ್ಲುಗಳು ಇವೇ ಮೊದಲಾದವುಗಳು ಇರುತ್ತವೆ.

प्र : त्वं नेत्राभ्यां किं करोषि ?

ಪ್ರ : ನೀನು ಕಣ್ಣುಗಳಿಂದ ಏನು ಮಾಡುತ್ತಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

उ : अहं नेत्राभ्यां पश्यामि ।
ಉ : ನಾನು ಕಣ್ಣುಗಳಿಂದ ನೋಡುವೆನು

प्र : त्वं कर्णाभ्यां किं करोषि ?
ಪ್ರ : ನೀನು ನಿನ್ನ ಕಿವಿಗಳಿಂದ ಏನು ಮಾಡುತ್ತಿ ?

उ : अहं कर्णाभ्यां शृणोमि ।
ಉ : ನಾನು ಕಿವಿಗಳಿಂದ ಕೇಳುತ್ತೇನೆ

प्र : त्वं नासिकया किं करोषि ?
ಪ್ರ : ನೀನು ಮೂಗಿನಿಂದ ಏನು ಮಾಡುತ್ತಿ ?

उ : अहं नासिकया जिघ्रामि ।
ಉ : ನಾನು ಮೂಗಿನಿಂದ ವಾಸನೆ ನೋಡುತ್ತೇನೆ

प्र : त्वं वदनेन किं करोषि ?
ಪ್ರ : ನೀನು ಬಾಯಿಯಿಂದ ಏನು ಮಾಡುತ್ತಿ ?

उ : अहं वदनेन अन्नं भक्षयामि ।
ಉ : ನಾನು ಬಾಯಿಯಿಂದ ಅನ್ನವನ್ನು ತಿನ್ನುತ್ತೇನೆ

प्र : त्वं जिह्वया किं करोषि ?
ಪ್ರ : ನೀನು ನಾಲಿಗೆಯಿಂದ ಏನು ಮಾಡುತ್ತಿ ?

उ : अहं जिह्वया रसयामि ।
ಉ : ನಾನು ನಾಲಿಗೆಯಿಂದ ರುಚಿ ನೋಡುತ್ತೇನೆ

प्र : त्वं दन्तैः किं करोषि ?
ಪ್ರ : ನೀನು ಹಲ್ಲುಗಳಿಂದ ಏನು ಮಾಡುತ್ತಿ ?

उ : अहं दन्तैः चर्वयामि ।
ಉ : ನಾನು ಹಲ್ಲುಗಳಿಂದ ಅಗಿಯುತ್ತೇನೆ

Sri Vidyabharathi Book Centre, Sringeri

CC-O. In Public Domain. Digitized by eGangotri

प्र : त्वं पादाभ्यां किं करोषि ?
ಪ್ರ: ನೀನು ನಿನ್ನ ಕಾಲುಗಳಿಂದ ಏನು ಮಾಡುತ್ತಿ ?

उ : अहं पादाभ्यां चरामि ।
ಉ: ನಾನು ನನ್ನ ಕಾಲುಗಳಿಂದ ನಡೆಯುತ್ತೇನೆ

प्र : त्वं हस्ताभ्यां किं करोषि ?
ಪ್ರ: ನೀನು ಕೈಗಳಿಂದ ಏನು ಮಾಡುತ್ತಿ ?

उ : अहं हस्ताभ्यां वस्तूनि गृह्णामि ।
ಉ: ನಾನು ಕೈಗಳಿಂದ ವಸ್ತುಗಳನ್ನು ತೆಗೆದುಕೊಳ್ಳುತ್ತೇನೆ.

प्र : त्वं अङ्गुलीभिः किं करोषि ?
ಪ್ರ: ನೀನು ಬೆರಳುಗಳಿಂದ ಏನು ಮಾಡುತ್ತಿ ?

उ : अहं अङ्गुलीभिः गणयामि ।
ಉ: ನಾನು ಬೆರಳುಗಳಿಂದ ಎಣಿಸುತ್ತೇನೆ

प्र : कण्ठः कुत्र वर्तते ?
ಪ್ರ: ಕುತ್ತಿಗೆ ಎಲ್ಲಿ ಇದೆ ?

उ : कण्ठः शिरसः अधस्तात् वर्तते ।
ಉ: ಕುತ್ತಿಗೆ ತಲೆಗೆ ಕೆಳಗಿನಭಾಗದಲ್ಲಿ ಇದೆ

प्र : कण्ठस्य अधस्तात् किं किं वर्तते ।
ಪ್ರ: ಕುತ್ತಿಗೆಯ ಕೆಳಗೆ ಯಾವ ಯಾವ ಅವಯವವಿದೆ ?

उ : कण्ठस्य अधस्तात् उरः, उदरं, हस्तौ, पादौ एते वर्तन्ते ।
ಉ: ಕುತ್ತಿಗೆಯ ಕೆಳಗಿನ ಭಾಗದಲ್ಲಿ ಎದೆ, ಹೊಟ್ಟೆ, ಕೈಗಳು, ಕಾಲುಗಳು ಇವು ಇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

क्रीडाङ्गणम्

ಆಟದ ಮೈದಾನ

प्रश्नः इदं किम् ?
ಪ್ರಶ್ನೆ: ಇದು ಏನು ?

उत्तरम् : इदं क्रीडाङ्गणम् ।
ಉತ್ತರ: ಇದು ಆಟದ ಮೈದಾನ

प्र : क्रीडाङ्गणे बालाः किं कुर्वन्ति ?
ಪ್ರ: ಆಟದ ಮೈದಾನದಲ್ಲಿ ಹುಡುಗರು ಏನು ಮಾಡುತ್ತಾರೆ ?

उ : क्रीडाङ्गणे बालाः क्रीडन्ति ।
ಉ: ಆಟದ ಮೈದಾನದಲ್ಲಿ ಹುಡುಗರು ಆಟ ಆಡುತ್ತಾರೆ

प्र : बालाः कथं क्रीडन्ति ?
ಪ್ರ: ಹುಡುಗರು ಹೇಗೆ ಆಡುತ್ತಿದ್ದಾರೆ ?

उ : बालाः कन्दुकैः क्रीडन्ति ।
ಉ: ಹುಡುಗರು ಚೆಂಡುಗಳಿಂದ ಆಡುತ್ತಿದ್ದಾರೆ

प्र : सः बालः किं करोति ?
ಪ್ರ: ಆ ಹುಡುಗ ಏನು ಮಾಡುತ್ತಿದ್ದಾನೆ ?

उ : सः बालः वक्रदण्डेन कन्दुकं ताडयति ।
ಉ: ಆ ಹುಡುಗನು ಸೊಟ್ಟ ಕೋಲಿಂದ ಚೆಂಡನ್ನು ಹೊಡೆಯುತ್ತಿದ್ದಾನೆ

Sri Vidyabharathi Book Centre, Sringeri

CC-O. In Public Domain. Digitized by eGangotri

प्र : अन्यः किं करोति ?
ಪ್ರ: ಮತ್ತೊಬ್ಬನು ಏನು ಮಾಡುತ್ತಿದ್ದಾನೆ ?

उ : अन्यः स्वदण्डेन कन्दुक प्रतिरुणद्धि ।
ಉ: ಮತ್ತೊಬ್ಬನು ತನ್ನ ಕೋಲಿಂದ ಚೆಂಡನ್ನು ತಡೆಯುತ್ತಿದ್ದಾನೆ

प्र : अहो ! इदानीं किं आसीत् ?
ಪ್ರ: ಆಹಾ ! ಈಗ ಏನು ಆಯಿತು ?

उ : कन्दुकः उभौ अपि वञ्चयित्वा धावितः ।
ಉ: ಚೆಂಡು ಇಬ್ಬರನ್ನು ಮೋಸಮಾಡಿ ಓಡಿಹೋಯಿತು

प्र : अयं अपरः कुतो धावति ?
ಪ್ರ: ಈ ಮತ್ತೊಬ್ಬನು ಏಕೆ ಓಡುತ್ತಿದ್ದಾನೆ ?

उ : अयं कन्दुकं ग्रहीतुं धावति ।
ಉ: ಇವನು ಚೆಂಡನ್ನು ತೆಗೆದುಕೊಳ್ಳಲು ಓಡುತ್ತಿದ್ದಾನೆ

प्र : कुतः सर्वे बालाः करतालं कुर्वन्ति ?
ಪ್ರ: ಯಾಕೆ ಎಲ್ಲಾ ಹುಡುಗರು ಕೈ ತಟ್ಟುತ್ತಿದ್ದಾರೆ

उ : अयमपि कन्दुक अगृहीत्वा पतितः । अतः सर्वे हसन्ति, करतालं कुर्वन्ति च ।
ಉ: ಇವನು ಕೂಡ ಚೆಂಡನ್ನು ಹಿಡಿಯದೆ ಕೆಳಗೆ ಬಿದ್ದನು. ಆದುದರಿಂದ ಎಲ್ಲರು ನಗುತ್ತಿದ್ದಾರೆ, ಚಪ್ಪಾಳೆಯೂ ತಟ್ಟುತ್ತಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

सूर्यः

ಸೂರ್ಯನು

तात : बाल ! सूर्यः कस्यां दिशि उदेति ?
ತಂದೆ: ಎಲೈ ಹುಡುಗನೇ! ಸೂರ್ಯನು ಯಾವ ದಿಕ್ಕಿನಲ್ಲಿ ಉದಯಿಸುತ್ತಾನೆ?

सुत : तात ! सूर्यः प्राच्यां दिशि उदेति ।
ಮಗ: ತಂದೆಯೇ! ಸೂರ್ಯ ಪೂರ್ವ ದಿಕ್ಕಿನಲ್ಲಿ ಉದಯಿಸುತ್ತಾನೆ

तात : सः कस्यां दिशि अस्तं गच्छति ?
ತಂದೆ: ಸೂರ್ಯ ಯಾವ ದಿಕ್ಕಿನಲ್ಲಿ ಅಸ್ತಮಿಸುತ್ತಾನೆ?

सुत : सः प्रतीच्यां दिशि अस्तं गच्छति ।
ಮಗ: ಸೂರ್ಯ ಪಶ್ಚಿಮ ದಿಕ್ಕಿನಲ್ಲಿ ಅಸ್ತಮಿಸುತ್ತಾನೆ

तात : सूर्येण अस्माकं किं प्रयोजनम् ?
ತಂದೆ: ಸೂರ್ಯನಿಂದ ನಿಮಗೆ ಏನು ಉಪಯೋಗ?

सुत : सूर्यः अस्माकं प्रकाशं उष्णं च यच्छति ।
ಮಗ: ಸೂರ್ಯ ನಮಗೆ ಬೆಳಕನ್ನೂ, ಬಿಸಿಯನ್ನೂ ಕೊಡುತ್ತಾನೆ

तात : सूर्यप्रकाशेन किं भवति ?
ತಂದೆ: ಸೂರ್ಯನ ಬೆಳಕಿನಿಂದ ಏನು ಆಗುತ್ತದೆ?

सुत : सूर्यप्रकाशेन अन्धकारः नश्यति ।
ಮಗ: ಸೂರ್ಯನ ಬೆಳಕಿನಿಂದ ಕತ್ತಲು ಕಳೆಯುತ್ತದೆ

Sri Vidyabharathi Book Centre, Sringeri

CC-O. In Public Domain. Digitized by eGangotri

तात : सूर्यस्य उष्णः किं करोति ?

ತಂದೆ: ಸೂರ್ಯನ ಬಿಸಿ ಏನು ಮಾಡುತ್ತದೆ?

सुत : सूर्यस्य उष्णः प्राणिनः रक्षति । किं च सूर्यः उष्णकिरणैः मेघान् जनयति ।

ಮಗ: ಸೂರ್ಯನ ಬಿಸಿ ಪ್ರಾಣಿಗಳನ್ನು ಕಾಪಾಡುತ್ತದೆ. ಅಷ್ಟೇ ಅಲ್ಲದೆ ಸೂರ್ಯ ತನ್ನ ಬಿಸಿ ಕಿರಣಗಳಿಂದ ಮೇಘಗಳನ್ನು ಉಂಟುಮಾಡುತ್ತಾನೆ.

तात : सूर्यदेवं कुतः जनाः पूजयन्ति ?

ತಂದೆ: ಸೂರ್ಯದೇವತೆಯನ್ನು ಯಾತಕ್ಕೆ ಜನರು ಪೂಜಿಸುತ್ತಾರೆ?

सुत : सूर्यः ग्रहाणां अधिपः । अपि च स्वकिरणैः लोकान् रक्षति । अतः जनाः तं पूजयन्ति ।

ಮಗ: ಸೂರ್ಯ ಗ್ರಹಗಳಿಗೆ ರಾಜ. ಅದಲ್ಲದೆ ತನ್ನ ಕಿರಣಗಳಿಂದ ಲೋಕಗಳನ್ನು ರಕ್ಷಿಸುತ್ತಾನೆ. ಆದುದರಿಂದ ಜನರು ಸೂರ್ಯನನ್ನು ಪೂಜಿಸುತ್ತಾರೆ.

ಸೂರ್ಯದೇವತೆಯ ಕೆಲವು ಹೆಸರುಗಳು

आदित्यः, सविता, सूर्यः,
खगः, पूषा, गभस्तिमान् ।
सुवर्ण सदृशः, भानुः,
हिरण्यरेताः, दिवाकरः ॥

Sri Vidyabharathi Book Centre, Sringeri

CC-O. In Public Domain. Digitized by eGangotri

रामायणकथा

1. अयोध्यायां दशरथः नाम राजा आसीत् ।
2. तस्य तिस्रः भार्याः आसन् ।
3. ताः क्रमेण कौसल्या, कैकेयी, सुमित्रा च ।
4. एतासु भार्यासु चत्वारः कुमाराः अजायन्त ।
5. तेषु प्रथमः रामः कौसल्यायाः पुत्रः ।
6. द्वितीयः भरतः कैकेय्याः पुत्रः ।
7. तृतीय-चतुर्थौ लक्ष्मणशत्रुघ्नौ सुमित्रायाः पुत्रौ ।
8. रामः पितुः आज्ञया वनं अगच्छत् ।
9. तेन सह लक्ष्मणः, सीता च अगच्छताम् ।
10. रावणो नाम राक्षसः वने सीतां अहरत् ।
11. सः तां लङ्कानगरे अस्थापयत् ।
12. रामः कपिराजेन सुग्रीवेण, हनुमता च सख्यं अकरोत् ।
13. हनुमान् समुद्रं उल्लङ्घ्य लङ्कायां सीतां अपश्यत् ।
14. वानराः समुद्रे सेतुं अबध्नन् ।
15. रामः लङ्कां गत्वा सर्वान् राक्षसान् रावणं च जघान ।
16. ततः सः सीतया सह अयोध्यां प्राप ।
17. अयोध्यां रामस्य पट्टाभिषेकः अभवत् ।

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಾಯಣ ಕಥೆ

---

1. ಅಯೋಧ್ಯಾಪಟ್ಟಣದಲ್ಲಿ ದಶರಥನೆಂಬ ರಾಜನಿದ್ದನು
2. ಅವನಿಗೆ ಮೂವರು ಹೆಂಡರು ಇದ್ದರು.
3. ಅವರು ಕ್ರಮವಾಗಿ ಕೌಸಲ್ಯೆ, ಕೈಕೇಯಿ, ಸುಮಿತ್ರೆ ಎಂಬವರು.
4. ಈ ಹೆಂಡರಲ್ಲಿ ನಾಲ್ಕು ಜನ ಗಂಡುಮಕ್ಕಳು ಹುಟ್ಟಿದರು.
5. ಅವರಲ್ಲಿ ಮೊದಲನೇಯವನಾದ ರಾಮನು ಕೌಸಲ್ಯೆಯ ಪುತ್ರ.
6. ಎರಡನೇಯವನಾದ ಭರತನು ಕೈಕೇಯಿಯ ಮಗನು.
7. ಮೂರನೆಯ ನಾಲ್ಕನೆಯವರಾದ ಲಕ್ಷ್ಮಣ ಶತ್ರುಘ್ನರು ಸುಮಿತ್ರೆಯ ಮಕ್ಕಳು.
8. ರಾಮ ತಂದೆಯ ಅಪ್ಪಣೆಯಿಂದ ಕಾಡಿಗೆ ಹೋದನು.
9. ಅವನ ಜೊತೆಯಲ್ಲಿ ಲಕ್ಷ್ಮಣನು, ಸೀತೆಯೂ ಹೋದರು.
10. ರಾವಣನೆಂಬ ರಾಕ್ಷಸನು ಕಾಡಿನಲ್ಲಿ ಸೀತೆಯನ್ನು ಅಪಹರಿಸಿದನು.
11. ಅವನು ಆ ಸೀತೆಯನ್ನು ಲಂಕಾಪಟ್ಟಣದಲ್ಲಿ ಇಟ್ಟನು.
12. ರಾಮ ವಾನರ ರಾಜನಾದ ಸುಗ್ರೀವನ ಕೂಡಲು, ಹನುಮಂತನ ಕೂಡಲು ಸ್ನೇಹವನ್ನು ಮಾಡಿದನು.
13. ಹನುಮಂತನು ಸಮುದ್ರವನ್ನು ದಾಟಿ ಲಂಕಾಪಟ್ಟಣದಲ್ಲಿ ಸೀತೆಯನ್ನು ನೋಡಿದನು.
14. ವಾನರರು ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದರು.
15. ರಾಮ ಲಂಕೆಗೆ ಹೋಗಿ ಸಮಸ್ತರಾಕ್ಷಸರನ್ನೂ, ರಾವಣನನ್ನೂ ಕೊಂದನು.
16. ಅನಂತರ ಆ ರಾಮನು ಸೀತೆಯ ಜೊತೆಯಲ್ಲಿ ಅಯೋಧ್ಯೆಗೆ ಬಂದನು.
17. ಅಯೋಧ್ಯೆಯಲ್ಲಿ ರಾಮನಿಗೆ ಪಟ್ಟಾಭಿಷೇಕವು ಆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

भागवतकथा

1. मथुरानगरे उग्रसेन इति राजा आसीत् ।

2. तस्य कंसः इति पुत्रः, देवकी इति पुत्री च अभवताम् ।

3. कंसः क्रूरः, राक्षसगुणसहितश्च ।

4. सः भगिन्याः विवाहं वसुदेवेन सह अकारयत् ।

5. तौ दम्पती रथे उपवेश्य कंसः स्वयं रथं अचालयत् ।

6. मध्येमार्गं 'रे कंस ! तव भगिन्याः अष्टमः गर्भः त्वां हनिष्यति' इति अशरीरिशब्दं कंसः अशृणोत् ।

7. एतत् श्रुत्वा कंसः भगिनीं, वसुदेवं च कारागृहे न्यक्षिपत् ।

8. देवक्याः पुत्रान् जातमात्रान् कंसः जघान ।

9. अष्टमगर्भं जातं पुत्रं वसुदेवः कंसभयात् नन्दगोपगृहं प्रापयति स्म ।

10. तत्र बलरामकृष्णौ अवर्धताम् ।

Sri Vidyabharathi Book Centre, Sringeri

CC-O. In Public Domain. Digitized by eGangotri

11. कंसः तौ हन्तुं राक्षसान् प्रैषयत् ।

12. पूतनाशकटासुरप्रभृतीन् राक्षसान् सर्वान् रामकृष्णौ अमारयताम् ।

13. श्रीकृष्णः स्वमातुलं कंसं अमारयत ।

14. पश्चात् शिशुपाल-दन्तवक्रादीन् बहून् राक्षसांश्च अहनत् ।

15. श्रीकृष्णः रुक्मिणीसत्यभामादिकाः अनेकसहस्रसंख्याकाः स्त्रियः उपयेमे ।

16. सः पाण्डवानां साहाय्यं अकरोत् ।

17. सः अर्जुनस्य सारथ्यमपि अकरोत् ।

18. अर्जुनः भारतयुद्धे दुर्योधनादीन् बहून् दुष्टान् अमारयत् ।

19. श्रीकृष्णः एवं बहून् दुर्जनान् हत्वा भुभारं अहरत् ।

वसुदेवसुतं देवं
कंसचाणूरमर्दनम् ।
देवकीपरमानन्दं
कृष्णं वन्दे जगद्गुरुम् ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾಗವತ ಕಥೆ

1. ಮಥುರಾಪಟ್ಟಣದಲ್ಲಿ ಉಗ್ರಸೇನನೆಂಬ ರಾಜ ಇದ್ದನು.

2. ಅವನಿಗೆ ಕಂಸನೆಂಬ ಮಗನೂ, ದೇವಕಿ ಎಂಬ ಮಗಳೂ ಇದ್ದರು.

3. ಕಂಸನು ಕ್ರೂರನೂ ರಾಕ್ಷಸಗುಣ ಉಳ್ಳವನೂ ಆಗಿದ್ದನು.

4. ಅವನು ತಂಗಿಯನ್ನು ವಸುದೇವನಿಗೆ ಕೊಟ್ಟು ಮದುವೆ ಮಾಡಿಸಿದನು.

5. ಆ ದಂಪತಿಗಳನ್ನು ತೇರಲ್ಲಿ ಕುಳ್ಳಿರಿಸಿ ಕಂಸನು ತಾನೇ ತೇರನ್ನು ನಡಿಸಿದನು.

6. ಮಾರ್ಗ ಮಧ್ಯದಲ್ಲಿ 'ಎಲೈ ಕಂಸನೇ! ನಿನ್ನ ತಂಗಿಯ ಎಂಟನೆಯ ಗರ್ಭದಲ್ಲಿ ಹುಟ್ಟುವವನು ನಿನ್ನನ್ನು ಕೊಲ್ಲುವನು' ಎಂಬ ಆಕಾಶವಾಣಿಯನ್ನು ಕಂಸನು ಕೇಳಿದನು.

7. ಇದನ್ನು ಕೇಳಿ ಕಂಸನು ತಂಗಿಯನ್ನೂ ವಸುದೇವನನ್ನೂ ಸೆರೆಯಲ್ಲಿ ಇಟ್ಟನು.

8. ದೇವಕಿಯ ಮಕ್ಕಳನ್ನು ಹುಟ್ಟಿದಕೂಡಲೇ ಕಂಸನು ಕೊಂದನು.

9. ಎಂಟನೆಯ ಗರ್ಭದಲ್ಲಿ ಹುಟ್ಟಿದ ಮಗನನ್ನು ವಸುದೇವ ಕಂಸನ ಭಯದಿಂದ ನಂದಗೋಪನ ಮನೆಯಲ್ಲಿ ಇರಿಸಿದ.

10. ಅಲ್ಲಿ ಬಲರಾಮಕೃಷ್ಣರು ಬೆಳೆಯುತ್ತಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

11. ಕಂಸನು ಅವರಿಬ್ಬರನ್ನು ಕೊಲ್ಲಲು ರಾಕ್ಷಸರನ್ನು ಕಳುಹಿಸಿದನು.

12. ಪೂತನೆ, ಶಕಟಾಸುರ ಮೊದಲಾದ ಸಮಸ್ತರಾಕ್ಷಸರನ್ನು ಬಲರಾಮಕೃಷ್ಣರು ಕೊಂದರು.

13. ಶ್ರೀಕೃಷ್ಣನು ತನ್ನ ಸೋದರಮಾವನಾದ ಕಂಸನನ್ನು ಕೊಂದನು.

14. ಅನಂತರ ಶಿಶುಪಾಲ, ದಂತವಕ್ತ್ರ ಮೊದಲಾದ ಅನೇಕ ರಾಕ್ಷಸರನ್ನೂ ಕೊಂದನು.

15. ಶ್ರೀಕೃಷ್ಣನು ರುಕ್ಮಿಣಿ, ಸತ್ಯಭಾಮೆ ಮೊದಲಾದ ಅನೇಕ ಸಾವಿರ ಲೆಕ್ಕವುಳ್ಳ ಸ್ತ್ರೀಯರನ್ನು ಮದುವೆಯಾದನು.

16. ಅವನು ಪಾಂಡವರಿಗೆ ಸಹಾಯವನ್ನು ಮಾಡಿದನು.

17. ಅವನು ಅರ್ಜುನನಿಗೆ ಸಾರಥ್ಯವನ್ನೂ ಮಾಡಿದನು.

18. ಅರ್ಜುನನು ಭಾರತದಯುದ್ಧದಲ್ಲಿ ದುರ್ಯೋಧನ ಮೊದಲಾದ ಅನೇಕ ದುಷ್ಟರನ್ನು ಕೊಂದನು

19. ಶ್ರೀಕೃಷ್ಣನು ಅನೇಕರಾದ ದುಷ್ಟರನ್ನು ಕೊಂದು ಭೂಭಾರ ಹೋಗಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

महाभारतकथा

1. हस्तिनापुरे धृतराष्ट्रः पाण्डुः इति द्वौ भ्रातरौ अवर्तेताम् ।
2. धृतराष्ट्रः अन्धः, पाण्डुः पाण्डुरोगी ।
3. ज्येष्ठः धृतराष्ट्रः कनिष्ठाय पाण्डवे अर्धराज्यं अयच्छत् ।
4. धृतराष्ट्रस्य दुर्योधनादयः शतं पुत्राः अभवन् ।
5. पाण्डोः धर्मराजः, भीमसेनः, अर्जुनः, नकुलः, सहदेवः इति पञ्च तनयाः आसन् ।
6. द्रौपदी पाण्डवानां धर्मपत्नी आसीत् ।
7. दुर्योधनः द्यूतेन पाण्डवानां राज्यं अपाहरत् ।
8. राज्यभ्रष्टाः पाण्डवाः द्रौपद्या सह वनं अगच्छन् ।
9. ते वने बहूनि कष्टानि अन्वभवन् ।
10. द्वादशवर्षपर्यन्तं ते वने न्यवसन् ।
11. त्रयोदशे वर्षे अज्ञातवासं विराटनगरे अकुर्वन् ।
12. चतुर्दशे वर्षे 'पुनः राज्यं प्रत्यर्पय' इति ते दुर्योधनं अपृच्छन् ।
13. लोभी दुर्योधनः राज्यं दातुं नैच्छत् ।
14. ततः कौरवपाण्डवानां मध्ये कुरुक्षेत्रे महत् युद्धं अभूत् ।
15. भगवान् श्रीकृष्णः पाण्डवानां पक्षे आसीत् ।
16. सः अर्जुनस्य रथसारथिश्च अभवत् ।
17. भीष्मद्रोणादयः दुर्योधनपक्षीयाः सर्वे अर्जुनेन मारिताः ।
18. दुर्योधन-दुश्शासनादयः भीमेन सहताः ।
19. ततः धर्मराजः पट्टाभिषेकमङ्गलं अन्वभवत् ।

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಭಾರತ ಕತೆ

---

1. ಹಸ್ತಿನಾಪುರದಲ್ಲಿ ಧೃತರಾಷ್ಟ್ರನು, ಪಾಂಡುವು ಎಂಬ ಇಬ್ಬರು ಅಣ್ಣತಮ್ಮಂದಿರಿದ್ದರು.

2. ಧೃತರಾಷ್ಟ್ರನು ಹುಟ್ಟುಕುರುಡನು. ಪಾಂಡುವು ಪಾಂಡು ರೋಗಿ.

3. ಹಿರಿಯವನಾದ ಧೃತರಾಷ್ಟ್ರನು ಕಿರಿಯವನಾದ ಪಾಂಡುವಿಗೆ ಅರ್ಧ ರಾಜ್ಯವನ್ನು ಕೊಟ್ಟನು.

4. ಧೃತರಾಷ್ಟ್ರನಿಗೆ ದುರ್ಯೋಧನ ಮೊದಲಾಗಿ ನೂರುಜನ ಮಕ್ಕಳು ಜನಿಸಿದರು.

5. ಪಾಂಡುವಿಗೆ ಧರ್ಮರಾಜ, ಭೀಮಸೇನ, ಅರ್ಜುನ, ನಕುಲ, ಸಹದೇವ ಎಂದು ಐದುಜನ ಮಕ್ಕಳಿದ್ದರು.

6. ದ್ರೌಪದಿ ಪಾಂಡವರಿಗೆ ಧರ್ಮಪತ್ನಿಯಾಗಿದ್ದಳು.

7. ದುರ್ಯೋಧನನು ಜೂಜಿನಿಂದ ಪಾಂಡವರ ರಾಜ್ಯವನ್ನು ಅಪಹರಿಸಿದನು.

8. ರಾಜ್ಯಭ್ರಷ್ಟರಾದ ಪಾಂಡವರು ದ್ರೌಪದಿಯ ಜೊತೆಯಲ್ಲಿ ಕಾಡಿಗೆ ಹೋದರು.

9. ಅವರು ಕಾಡಿನಲ್ಲಿ ಬಹು ಕಷ್ಟಗಳನ್ನು ಅನುಭವಿಸಿದರು.

10. ಹನ್ನೆರಡು ವರ್ಷಗಳವರೆಗೂ ಅವರು ಕಾಡಿನಲ್ಲಿ ವಾಸಮಾಡಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

11. ಹದಿಮೂರನೇ ವರ್ಷದಲ್ಲಿ ಅಜ್ಞಾತವಾಸವನ್ನು ವಿರಾಟರಾಜನ ನಗರದಲ್ಲಿ ಮಾಡಿದರು.

12. ಹದಿನಾಲ್ಕನೆಯ ವರ್ಷದಲ್ಲಿ 'ಮತ್ತು ರಾಜ್ಯವನ್ನು ತಿರುಗಿಸಿ ಕೊಡು' ಎಂದು ಅವರು ದುರ್ಯೋಧನನನ್ನು ಕೇಳಿದರು.

13. ಜಿಪುಣನಾದ ದುರ್ಯೋಧನನು ರಾಜ್ಯವನ್ನು ಕೊಡಲು ಇಷ್ಟಪಡಲಿಲ್ಲ.

14. ಅನಂತರ ಕೌರವ ಪಾಂಡವರ ಮಧ್ಯದಲ್ಲಿ ಕುರುಕ್ಷೇತ್ರದಲ್ಲಿ ದೊಡ್ಡ ಯುದ್ಧ ನಡೆಯಿತು.

15. ಭಗವಂತನಾದ ಶ್ರೀಕೃಷ್ಣನು ಪಾಂಡವರ ಕಡೆ ಇದ್ದನು.

16. ಅವನು ಅರ್ಜುನನಿಗೆ ರಥಸಾರಥಿಯಾಗಿಯೂ ಇದ್ದನು.

17. ಭೀಷ್ಮ, ದ್ರೋಣ ಮೊದಲಾಗಿ ದುರ್ಯೋಧನನ ಪಕ್ಷಕ್ಕೆ ಸೇರಿದವರೆಲ್ಲರು ಅರ್ಜುನನಿಂದ ಕೊಲ್ಲಿಸಲ್ಪಟ್ಟರು.

18. ದುರ್ಯೋಧನ, ದುಶ್ಶಾಸನ ಮೊದಲಾದವರು ಭೀಮನಿಂದ ಕೊಲ್ಲಲ್ಪಟ್ಟರು.

19. ಅನಂತರ ಧರ್ಮರಾಜ ಪಟ್ಟಾಭಿಷೇಕ ಮಂಗಳವನ್ನು ಅನುಭವಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುವಾದಗಳು:

ಕನ್ನಡದಲ್ಲಿ ಅನುವದಿಸಿ

पितुः आज्ञानुवर्ती परशुरामः

पुरा जमदग्निर्नाम मुनिः आसीत्। तस्य त्रयः पुत्राः अभवन्। तेषु कनिष्ठः परशुरामः। तस्य जननी कदाचित् विकृतमानसा भूत्वा होमाय तीर्थं उचिते काले न आहृतवती। तस्याः मनोविकारं ज्ञात्वा जमदग्निः तां हन्तुं पुत्रान् आदिशत्।

प्रथमौ द्वावपि सुतौ मातृहननं अन्याय्यं इति मत्वा तूष्णीं अभवताम्। तेन नितान्तं क्रुद्धो जमदग्निः परशुरामं अब्रवीत्—"वत्स, अग्रजौ मातरं च मारय" इति। सः पितुराज्ञां शिरसा वहन्, तथैव जननीं सोदरौ च हत्वा पितरमुपजगाम।

तेन कर्मणा अतिप्रीतो जमदग्निः, "वत्स, वरं वृणीष्व" इति व्याजहार। तदा परशुरामः, "मम माता अग्रजौ च सजीवाः उत्तिष्ठेयुः" इति वरं वव्रे। जमदग्निरपि "तथास्तु" इत्युक्त्वा कमण्डलुजलेन तान् अजीवयत्। पश्यत, पितुः आज्ञानुवर्तनेन परशुरामः पितृप्रीतिं, स्वजननीं, ज्येष्ठौ च सर्वं प्राप्तवान्। अतः—"आज्ञा गुरूणां अविचारणीया।"

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸ್ಕೃತದಲ್ಲಿ ಅನುವದಿಸಿ:

ಶೂರ್ಪಣಖಿಯ ಉಪಾಖ್ಯಾನ

ಶೂರ್ಪಣಖಿ ರಾವಣನ ತಂಗಿ. ಒಂದು ದಿನ ರಾಮ ಮತ್ತು ಸೀತೆ ಅವರ ಪರ್ಣಶಾಲೆಯಲ್ಲಿ ಕುಳಿತಿದ್ದರು. ಲಕ್ಷ್ಮಣನು ಪರ್ಣಶಾಲೆಯ ಹೊರಗೆ ಸೌದೆಯನ್ನು ಕಡಿಯುತ್ತಿದ್ದನು ಶೂರ್ಪಣಖೆ ಅಲ್ಲಿಗೆ ಬಂದು ಅವರನ್ನು ನೋಡಿದಳು. ಅವಳು ರಾಮನ ಹೆಂಡತಿಯಾಗಬೇಕೆಂದು ಬಯಸಿದಳು.

ಅವಳು ಅವರ ಹತ್ತಿರಹೋಗಿ "ಸ್ವಾಮೀ! ನಾನು ರಾವಣನ ತಂಗಿ. ನನ್ನ ಹೆಸರು ಶೂರ್ಪಣಖೆ. ನಾನು ನಿನ್ನನ್ನು ಮದುವೆಯಾಗಲು ಬಯಸುತ್ತೇನೆ. ದಯವಮಾಡಿ ನನ್ನ ಪ್ರಾರ್ಥನೆಯನ್ನು ಅಂಗೀಕರಿಸು" ಎಂದಳು. ಆದರೆ ರಾಮನು "ನೋಡು, ನನ್ನ ಹೆಂಡತಿ ನನ್ನೊಡನೆ ಇದ್ದಾಳೆ. ಅಲ್ಲಿ ನನ್ನ ತಮ್ಮ ಲಕ್ಷ್ಮಣ ನಿಂತಿದ್ದಾನೆ. ಅವನಿಗೆ ಹೆಂಡತಿ ಯಿಲ್ಲ. ನೀನು ಹೋಗಿ ಅವನನ್ನು ಕೇಳಿದರೆ ಖಂಡಿತವಾಗಿ ಅವನು ನಿನ್ನನ್ನು ಹೆಂಡತಿಯಾಗಿ ಸ್ವೀಕರಿಸುತ್ತಾನೆ.

ಆಮೇಲೆ ಶೂರ್ಪಣಖೆ ಲಕ್ಷ್ಮಣನ ಬಳಿಗೆ ಹೋದಳು. ಅವಳು "ನಿಮ್ಮಣ್ಣ ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು. ನಾನು ನಿನ್ನ ಹೆಂಡತಿಯಾಗಲು ಬಯಸುತ್ತೇನ" ಎಂದು ಹೇಳಿದಳು. ಲಕ್ಷ್ಮಣನು "ಓ ಮೂಢ ಹೆಂಗಸೇ! ನಾನು ರಾಮನ ಸೇವಕ. ನೀನು ಒಬ್ಬ ಸೇವಕನ ಹೆಂಡತಿಯಾಗಲು ಬಯಸುತ್ತೀಯಾ?" ಎಂದು ಕೇಳಿದನು.

ಶೂರ್ಪಣಖಿ ಒಂದು ನಿಮಿಷ ಯೋಚಿಸಿದಳು. ಅವಳು ರಾಮನ ಬಳಿಗೆ ಹಿಂದಿರುಗಿ ಬಂದು ಮತ್ತೆ ತನ್ನನ್ನು ಮದುವೆಯಾಗಬೇಕೆಂದು ಬೇಡಿದಳು. ಈ ಸಂದರ್ಭದಲ್ಲಿ ಸೀತೆ ನಕ್ಕಳು. ಶೂರ್ಪಣಖೆ ಕೋಪ ದಿಂದ ಸೀತೆಯನ್ನು ಕೊಲ್ಲಲು ಓಡಿದಳು. ಆದರೆ ಲಕ್ಷ್ಮಣನು ಕೂಡಲೆ ಶೂರ್ಪಣಖಿಯ ಮೂಗು ಮತ್ತು ಕಿವಿಗಳನ್ನು ಖಡ್ಗದಿಂದ ತುಂಡರಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

"परधर्मः भयावहः"

कस्यचित् रजकस्य गृहे गर्दभः कुक्कुरश्च अभवताम्। कस्यांचित् रात्रौ केचित् चोराः तस्य रजकस्य गृहं अविशन्। तान् कुक्कुरः गर्दभश्च अपश्यताम्। कुक्कुरः भषणं अकृत्वा तूष्णीं अभवत्। तं दृष्ट्वा गर्दभः आह—"मित्र, चोराः स्वमिनः गृहे प्रविशन्ति। कुतः त्वं तूष्णीं तिष्ठसि?" इति।

कुक्कुरः प्रत्यवदत्—"विशन्तु ते यथेच्छम्। अयं कथं स्वामी? मह्यं पर्याप्तं अन्नं न यच्छति। प्रत्युत पदे पदे ताडयति" इति।

एतत् प्रत्युत्तरं असहमानः सः गर्दभः, स्वामिनं उत्थापयितु उच्चैः अक्रोशत्। अनेन गर्दभस्वरेण भीताः चोराः झटिति तस्मात् गृहात् बहिः पलायामासुः। सुखसुप्तः रजकः रासभरावेण निद्राभङ्गं आप। स उत्थाय यदा गृहं परितः पश्यति तदा रासभ एव तत्र तिष्ठति स्म। सः अतिक्रोधेन स्वनिद्राभङ्गकारिणं तं रासभं महता लगुडेन शिरसि अताडयत्। पश्यत! अपरिचितजनप्रवेशं दृष्ट्वा भषणं कुक्कुरस्य कर्म न गर्दभस्य। यतः गर्दभः अन्यकर्म कृतवान् अतः दण्डाहतिं अन्वभवत्। अत एव वदन्ति—"परधर्मो भयावहः" इति।

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸ್ಕೃತದಲ್ಲಿ ಅನುವದಿಸಿ:

ತೋಳ ಮತ್ತು ಕೊಕ್ಕರೆ

ಒಂದುಬಾರಿ ತೋಳ ಒಂದು ಆಡನ್ನು ಕೊಂದು ತಿಂದಿತು. ಒಂದು ಮೂಳೆ ಅದರ ಗಂಟಲಿನಲ್ಲಿ ಸಿಕ್ಕಿಕೊಂಡಿತು. ಅಧಿಕವಾದ ನೋವಿನಿಂದ ಅದು ಕೂಗುತ್ತಾ ಕಾಡಿನಲ್ಲೆಲ್ಲ ಅಲೆದಾಡಿತು. ಒಂದು ಕೊಕ್ಕರೆಪಕ್ಷಿಯನ್ನು ನೋಡಿ "ಮಿತ್ರನೇ! ನಿನ್ನ ಉದ್ದವಾದ ಕುತ್ತಿಗೆಯ ಸಹಾಯದಿಂದ ನನ್ನ ಗಂಟಲಿನಲ್ಲಿರುವ ಮೂಳೆಯನ್ನು ತೆಗೆದುಬಿಡು. ನೀನು ಮಾಡಿದ ಸಹಾಯಕ್ಕೆ ನಿನಗೊಂದು ಭಾರಿ ಬಹುಮಾನವನ್ನು ಕೊಡುವೆನು" ಎಂದು ಬೇಡಿತು.

ಆ ಪ್ರಾರ್ಥನೆಯನ್ನು ಒಪ್ಪಿಕೊಂಡು ಆ ಪಕ್ಷಿ ತನ್ನ ಉದ್ದವಾದ ಕುತ್ತಿಗೆಯನ್ನು ತೋಳದ ಬಾಯಲ್ಲಿ ಇಟ್ಟು ಆ ಮೂಳೆಯನ್ನು ತೆಗೆದು ಬಿಟ್ಟಿತು.

ತೋಳ ನೋವಿನಿಂದ ಪಾರಾಯಿತು. ಪಕ್ಷಿ, ತೋಳ ವಾಗ್ದಾನ ಮಾಡಿದ ಬಹುಮಾನವನ್ನು ಕೇಳಿತು. ಆದರೆ ತೋಳ ಕೋಪದಿಂದ "ಎಲೈ! ನೀನೆಂತಹ ಮೂಢನು! ನಿನ್ನ ಕುತ್ತಿಗೆ ನನ್ನ ಬಾಯಿಯಲ್ಲಿದ್ದಾಗ ನಾನು ಅದನ್ನು ನನ್ನ ಹಲ್ಲುಗಳಿಂದ ಕಡಿಯುದೇಯಿದ್ದೆ. ನಿನ್ನನ್ನು ಪ್ರಾಣದೊಡನೆ ಬಿಟ್ಟೆ. ಇದೇ ನಿನಗೆ ದೊಡ್ಡ ಬಹುಮಾನವಲ್ಲವೇ?" ಎಂದು ಉತ್ತರಿಸಿತು.

ಆ ಪಕ್ಷಿ ಆ ಕ್ರೂರಪ್ರಾಣಿಗೆ ಮಾಡಿದ ಸಹಾಯಕ್ಕೆ ಪಶ್ಚಾತ್ತಾಪ ಪಡುತ್ತಾ ಹೊರಟು ಹೋಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡದಲ್ಲಿ ಅನುವಾದಿಸಿ :

स्वर्णाण्डजननी हंसी

कस्यचित् कृषीवलस्य कुटीरे काचित् हंसी अभवत् । सा प्रतिदिनं एकं स्वर्णाण्डं जनयति स्म । बहुकुटुम्बी स कृषीवलः तं स्वर्णाण्डं आपणे विक्रीय तल्लब्धेन धनेन भोजनादिसामग्रीः क्रीत्वा कुटुम्बं पोषयन्नास्त ।

कस्मिंश्चिद्दिने स कृषीवलः स्वमनसि एवमचिन्तयत — "अहो अस्याः हंस्याः अण्डेन यथाकथञ्चित् नित्यजीवनं करोमि । न अन्यानिव धनी भवामि । हंसी तु मह्यं प्रतिदिनं एकं स्वर्णाण्डं नियमेन ददाति । सत्यम्, अस्याः उदरे बहूनि अण्डानि स्युः । यदि अहं अस्याः उदरं दारयेयं तर्हि एकदैव मे बहूनि स्वर्णाण्डानि लभ्येरन् । तानि सर्वाणि विक्रीय तल्लब्धेन धनेन बहूनि दुर्लभानि पण्यानि क्रीयेय । तानि लाभाय विक्रीय धनवान् भविष्यामि ।" इति ।

एवं निश्चित्य सः तां हंसीं अखण्डयत् । हन्त ! तस्याः उदरे किमपि अण्डं स नापश्यत् । सः स्वमूर्खतां प्रति पश्चात्तापं अभजत ।

"लुब्धस्य लब्धं किंचिदपि नश्यति ।"

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸ್ಕೃತದಲ್ಲಿ ಅನುವದಿಸಿ:

ಬು ದ್ಧಿ ವ ಂ ತ ನಾ ದ ಪ್ರ ಯಾ ಣಿ ಕ

ಬೇಸಗೆಕಾಲದ ಒಂದು ದಿನದಲ್ಲಿ ಒಬ್ಬ ಪ್ರಯಾಣಿಕನು ಕಾಡಿನ ದಾರಿಯಲ್ಲಿ ನಡೆಯುತ್ತಿದ್ದನು. ಮಧ್ಯಾಹ್ನವಾಗುವ ವೇಳೆಗೆ ಅವನಿಗೆ ಬಹಳ ಬಾಯಾರಿಕೆಯಾಯಿತು. ಎಲ್ಲ ಸರೋವರಗಳು ಮತ್ತು ನದಿಗಳು ಒಣಗಿ ಹೋಗಿದ್ದಕಾರಣ ಅವನಿಗೆ ಕುಡಿಯಲು ನೀರು ಸಿಕ್ಕಲಿಲ್ಲ.

ಕೊನೆಗೆ ಅವನು ಒಂದು ತೆಂಗಿನ ಮರದ ಬಳಿಗೆ ಬಂದನು. ಅದರಲ್ಲಿ ಬಹಳ ತೆಂಗಿನಕಾಯಿಗಳಿದ್ದವು. ಆ ಮರವು ಬಹಳ ಎತ್ತರವಾಗಿದ್ದುದರಿಂದ ಅವನಿಗೆ ಆ ಕಾಯಿಗಳು ನಿಲುಕಲಿಲ್ಲ.

ಆ ಮರದಲ್ಲಿ ಕೆಲವು ಮಂಗಗಳಿರುವುದನ್ನು ನೋಡಿ ಆ ಬುದ್ಧಿವಂತನಾದ ಪ್ರಯಾಣಿಕನು ಒಂದು ಉಪಾಯವನ್ನು ಆಲೋಚಿಸಿದನು. ಅವನು ಕೆಲವು ಕಲ್ಲುಗಳನ್ನು ತೆಗೆದುಕೊಂಡು ಎಡಬಿಡದೆ ಬೀಸಿದನು.

ಅನಂತರ, ಇತರರನ್ನು ಅನುಕರಣಮಾಡುವ ಸ್ವಭಾವವುಳ್ಳ ಆ ಮಂಗಗಳು ಕೆಲವು ಕಾಯಿಗಳನ್ನು ಕೊಯ್ದು ಪ್ರಯಾಣಿಕನ ಕಡೆ ಎಸೆದವು. ಅವನು ಬಹಳ ಸಂತೋಷದಿಂದ ಆ ಕಾಯಿಗಳನ್ನು ಎತ್ತಿಕೊಂಡನು. ಅದರ ಸಿಹಿಯಾದ ನೀರಿನಿಂದ ತನ್ನ ಬಾಯಾರಿಕೆಯನ್ನು ತೀರಿಸಿಕೊಂಡು ತನ್ನ ದಾರಿಯಲ್ಲಿ ನಡೆದನು.

ಸಮಯಾಲೋಚನೆಯು ಮಾನವನಿಗೆ ಉತ್ತಮ ಮಿತ್ರನೆಂತಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡದಲ್ಲಿ ಅನುವದಿಸಿ:

युक्तिशाली जम्बुकः

रात्रौ इतस्ततः सञ्चरन् कश्चित् जम्बुकः कूपे पपात। तस्मात् कूपात् उत्तरितुं तस्य शक्तिः नासीत। सः कथञ्चित् पुरः पादाभ्यां यत्किञ्चित् आलम्ब्य आप्रभातं अन्तरेव अवर्तत।

प्रभाते गृहस्य किङ्करी जलमुद्धर्तुं तं कूपं जगाम। सा रज्जु घटे बद्ध्वा, अन्तर्मोक्तुं अवनमन्ती कूपस्थितं शृगालं अपश्यत्। ततः सा गत्वा गृहे स्थितान् पुरुषान् आजुहाव।

ते कूपतीरमागत्य घटीयन्त्रपात्रं उभयतो रज्ज्वा बद्ध्वा अन्तरमुञ्चन्। जलेन साकं स शृगालः पात्रे अपतत्। किन्तु स युक्तिशाली स्वपादान् प्रसार्य चक्षुषी निमील्य मृताभिनयं कुर्वन् तस्मिन् जले काष्ठवत् पुप्लुवे।

सर्वे तं मृतममत्यन्त। एवं मन्यमानास्तेतत्पात्रमुद्धृत्य जलेन सह तं भूमौ अपवर्जयामासुः। स तु क्षणं मृतवत् स्थित्वा पश्यत्स्वेव तेषु झटिति एकेन प्लुतेन सन्निहितं इक्षुक्षेत्रं प्राविशत्।

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸ್ಕೃತದಲ್ಲಿ ಅನುವದಿಸಿ:

ಸಮಾನವಾಗದ ಸ್ನೇಹ

ಒಂದು ಕರಡಿ ಮತ್ತು ಒಬ್ಬ ಮನುಷ್ಯನು ಸ್ನೇಹದಿಂದ ಇದ್ದರು. ಅವರಿಬ್ಬರು ಒಂದು ಕಾಡಿನಲ್ಲಿ ಹೋಗುತ್ತಿದ್ದರು. ಮಧ್ಯಾಹ್ನದಲ್ಲಿ ಅವರಿಬ್ಬರು ಒಂದು ಮರದ ನೆರಳಿನಲ್ಲಿ ಕುಳಿತರು. ಮನುಷ್ಯನಿಗೆ ನಿದ್ದೆ ಬರುತ್ತಿದ್ದರೂ ಒಂದು ನೊಣ ಅವನ ಮುಖದ ಸುತ್ತ ಹಾರುತ್ತಿದ್ದ ಕಾರಣ ನಿದ್ದೆ ಹೋಗಲು ಆಗಲಿಲ್ಲ.

ಇದ್ದನ್ನು ನೋಡುತ್ತಿದ್ದ ಕರಡಿ "ನನ್ನ ಮಿತ್ರನನ್ನು ತೊಂದರೆ ಕೊಡುತ್ತಿರುವ ಈ ನೊಣವನ್ನು ಕೊಲ್ಲುವೆ" ನೆಂದು ಯೋಚಿಸಿತು. ಹೀಗೆ ಯೋಚಿಸುತ್ತ ಅದು ತನ್ನ ಕಾಲಿನಿಂದ ಆ ಮನುಷ್ಯನ ಮುಖದ ಮೇಲಿದ್ದ ನೊಣವನ್ನು ಹೊಡೆಯಿತು. ಆ ಏಟು ನೊಣವನ್ನೇನೋ ಕೊಂದಿತು. ಆದರೆ ಅದೇ ಸಮಯದಲ್ಲಿ ಆ ಮನುಷ್ಯನ ಮುಖವನ್ನು ಗಾಯಮಾಡಿತು. ಆದುದರಿಂದ ಸಮಾನವಲ್ಲದ ಸ್ನೇಹವು ಯಾವಾಗಲು ಅಪಾಯಕರ.

ವಿದ್ಯೆ ಧನಕ್ಕಿಂತಲು ಹೆಚ್ಚಾದುದು

ಒಬ್ಬ ಬ್ರಾಹ್ಮಣನಿಗೆ ಇರ್ವರು ಪುತ್ರರಿದ್ದರು. ಆತನು ತನ್ನ ಆಸ್ತಿಯನ್ನೆಲ್ಲ ಹಿರಿಯಮಗನಿಗೆ ಕೊಟ್ಟುಬಿಟ್ಟನು. ಕಿರಿಯಮಗನಿಗೆ ಆಸ್ತಿಯನ್ನು ಕೊಡಲಿಲ್ಲ. ಆದರೆ ಆತನು ತನ್ನ ಕಿರಿಯಮಗನಿಗೆ ಎಲ್ಲ ಶಾಸ್ತ್ರಗಳನ್ನು ಕಲಿಸಿಕೊಟ್ಟನು. ಕಾಲಕ್ರಮದಲ್ಲಿ ಹಿರಿಯಮಗನು ಮದುವೆ ಮಾಡಿಕೊಂಡನು. ಅವನು ಕೆಲವು ಮಕ್ಕಳಿಗೆ ತಂದೆಯಾದನು.

ಅವನು ತನ್ನ ಆಸ್ತಿಯನ್ನೆಲ್ಲಾ ಸಂಸಾರಕ್ಕೋಸ್ಕರ ಖರ್ಚುಮಾಡಿ ಬಡವನಾದನು. ಆದರೆ ಕಿರಿಯಮಗನು ತನ್ನ ವಿದ್ಯೆಯಿಂದ ಹೆಚ್ಚು ಹಣವನ್ನು ಗಳಿಸಿ ಸುಖವಾಗಿ ಜೀವಿಸಿದನು. ವಿದ್ಯಾವಂತನು ಯಾವಾಗಲೂ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯೆ

विद्या ददाति विनयं विनयाद्याति पात्रताम् ।
पात्रत्वाद्धनमाप्नोति धनाद्धर्मं ततः सुखम् ॥

ವಿದ್ಯೆ ವಿನಯವನ್ನು ಕೊಡುತ್ತದೆ. ವಿನಯದಿಂದ ಮಾನವನು ಸತ್ಪಾತ್ರನಾಗುತ್ತಾನೆ. ಪಾತ್ರತೆಯಿಂದ ಹಣವನ್ನು ಗಳಿಸುತ್ತಾನೆ. ಹಣದಿಂದ ಧರ್ಮವನ್ನು ಅದರಿಂದ ಸುಖವನ್ನು ಹೊಂದುತ್ತಾನೆ.

सुखार्थी चेत्त्यजेद्विद्यां विद्यार्थी चेत्त्यजेत्सुखम् ।
सुखार्थिनः कुतो विद्या कुतो विद्यार्थिनः सुखम् ? ॥

ಮಾನವನು ಸುಖವನ್ನು ಬಯಸುವಲ್ಲಿ ವಿದ್ಯೆಯನ್ನು ಬಿಡಬೇಕು. ವಿದ್ಯೆಯನ್ನು ಬಯಸುವಲ್ಲಿ ಸುಖವನ್ನು ಬಿಡಬೇಕು. ಸುಖವನ್ನು ಬಯಸುವವನಿಗೆ ವಿದ್ಯೆ ಹೇಗೆ ಲಭಿಸೀತು? ವಿದ್ಯೆ ಬಯಸುವವನಿಗೆ ಸುಖವು ಹೇಗೆ ಲಭಿಸೀತು?

आचार्यात् पादमादत्ते पादं शिष्यः स्वमेधया ।
पादं सब्रह्मचारिभ्यः पादं कालक्रमेण च ॥

ಶಿಷ್ಯ ಗುರುವಿನ ದೆಸೆಯಿಂದ ಕಾಲುಭಾಗ ವಿದ್ಯೆಯನ್ನು ಗ್ರಹಿಸುತ್ತಾನೆ. ಮತ್ತೊಂದು ಕಾಲುಭಾಗ ತನ್ನ ಬುದ್ಧಿಯಿಂದ ತಿಳಿದುಕೊಳ್ಳುತ್ತಾನೆ. ಮತ್ತೊಂದು ಕಾಲುಭಾಗ ಜೊತೆಯಲ್ಲಿ ಓದುವ ವಿದ್ಯಾರ್ಥಿಗಳ ಕಡೆಯಿಂದ ಗ್ರಹಿಸುತ್ತಾನೆ. ಮತ್ತೊಂದು ಕಾಲುಭಾಗ ಸ್ವಲ್ಪಕಾಲ ಕಳೆದ ನಂತರ ಗ್ರಹಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

विद्वत्त्वं च नृपत्वं च नैव तुल्यं कदाचन ।
स्वदेशे पूज्यते राजा विद्वान् सर्वत्र पूज्यते ॥

ವಿದ್ಯಾವಂತನಾಗಿ ಇರೋಣ ರಾಜನಾಗಿ ಇರೋಣ ಇವೆರೆಡು ಪರಸ್ಪರ ಸಮಾನವಾಗಿ ಯಾವಾಗಲೂ ಆಗಲಾರದು. ಯಾಕೆಂದರೆ ರಾಜ ತನ್ನ ದೇಶದಲ್ಲಿ ಮಾತ್ರ ಗೌರವಿಸಲ್ಪಡುವನು. ಆದರೆ ವಿದ್ಯಾವಂತನು ಸಮಸ್ತದೇಶಗಳಲ್ಲಿಯೂ ಗೌರವಿಸಲ್ಪಡುವನು.

पुस्तकस्था च या विद्या परहस्ते च यद्धनम् ।
कार्यकाले समुत्पन्ने न सा विद्या न तद्धनम् ॥

ಪುಸ್ತಕದಲ್ಲಿರುವ ವಿದ್ಯೆಯೂ, ಇತರರ ಕೈಯಲ್ಲಿರುವ ನಮ್ಮ ಹಣವೂ ನಮಗೆ ಬೇಕಾದ ಸಮಯದಲ್ಲಿ ಒದಗದೆ ಹೋದ ಪಕ್ಷಕ್ಕೆ ಅವೆರಡೂ ಇದ್ದರೂ ಇಲ್ಲದ ಪ್ರಾಯವೆ

नास्ति विद्यासमं चक्षुः नास्ति सत्यसमं तपः ।
नास्ति रागसमं दुःख नास्ति त्यागसमं सुखम् ॥

ವಿದ್ಯೆಗೆ ಸಮವಾದ ನೇತ್ರವಿಲ್ಲ. ಸತ್ಯಕ್ಕೆ ಸಮವಾದ ತಪಸ್ಸಿಲ್ಲ. ಇಚ್ಛಾಕ್ಕೆ ಸಮವಾದ ದುಃಖವಿಲ್ಲ. ತ್ಯಾಗಕ್ಕೆ ಸಮವಾದ ಸುಖವಿಲ್ಲ.

ದುರ್ಜನರ ಪರಿಹಾರ

त्यज दुर्जनसंसर्गं भज साधु समागमम् ।
कुरु पुण्यमहोरात्र स्मर नित्यमनित्यताम् ॥

ದುಷ್ಟರೊಂದಿಗೆ ಸಹವಾಸವನ್ನು ಬಿಡು. ಸಜ್ಜನರೊಂದಿಗೆ ಸಮಾಗಮವನ್ನು ಮಾಡು. ರಾತ್ರಿ, ಹಗಲು ಪುಣ್ಯಕಾರ್ಯಗಳನ್ನು ಮಾಡು. ದೇಹ ಶಾಶ್ವತವಲ್ಲವೆಂದು ನಿರಂತರ ಸ್ಮರಣೆಮಾಡುತ್ತಿರು

Sri Vidyabharathi Book Centre, Sringeri

CC-O. In Public Domain. Digitized by eGangotri

दुर्जनः परिहर्तव्यो विद्ययालङ्कृतोऽपिसन् ।
मणिना भूषितः सर्पः किमसौ न भयङ्करः ? ॥

ವಿದ್ಯಾವಂತನಾಗಿದ್ದರೂ ಸಹ ದುಷ್ಟನು ಅವಶ್ಯವಾಗಿ ತ್ಯಜಿಸಲ್ಪಡ ಬೇಕು ಸರ್ಪವು ತನ್ನ ಶಿರಸ್ಸಿನಲ್ಲಿರುವ ಮಾಣಿಕ್ಯದಿಂದ ಶೋಭಿಸುತ್ತಾ ಇದ್ದರೂ ಜನರಿಗೆ ಭಯವನ್ನುಂಟುಮಾಡುವದಿಲ್ಲವೆ ?

दुर्जनेन समं सख्यं द्वेषं वापि न कारयेत् ।
उष्णो दहति चाङ्गारः शीतः कृष्णायते करम् ॥

ದುಷ್ಟನೊಂದಿಗೆ ಸ್ನೇಹವನ್ನಾಗಲಿ ವಿರೋಧವನ್ನಾಗಲಿ ಮಾಡ ಬಾರದು. ಕೆಂಡವನ್ನು ಮುಟ್ಟಿದರೆ ಕೈಯನ್ನು ಸುಡುತ್ತದೆ. ಇದ್ದಲವನ್ನು ಮುಟ್ಟಿದರೆ ಕೈಗೆ ಮಸಿ ಹತ್ತುತ್ತದೆ.

उपदेशो हि मूर्खाणां प्रकोपाय न शान्तये ।
पयःपानं भुजङ्गानां केवलं विषवर्धनम् ॥

ಮೂರ್ಖರಿಗೆ ಉಪದೇಶ ಮಾಡಿದರೆ ಮತ್ತಷ್ಟು ಕೋಪವೇ ಬರುವದು ಹೊರತು ಶಾಂತಗುಣ ಬರುವದಿಲ್ಲ. ಸರ್ಪಗಳಿಗೆ ಎಷ್ಟು ಹಾಲು ಕುಡಿಸಿ ದರೂ ಅದರಿಂದ ವಿಷವೇ ಹೆಚ್ಚಾಗುತ್ತದೆ

काकः कृष्णः पिकःकृष्णः को भेदः पिककाकयोः ।
वसन्तकाले सम्प्राप्ते काकः काकः पिकः पिकः ॥

ಕಾಗೆ ಮತ್ತು ಕೋಗಿಲೆ ಎರಡೂ ಬಣ್ಣದಿಂದ ಕಪ್ಪಗೆ ಇರುತ್ತದೆ. ಇವೆರಡಕ್ಕೂ ಭೇದವೇನು ? ವಸಂತ ಋತುವು ಬಂದಾಗ ಕೋಗಿಲೆ ಮಧುರವಾಗಿ ಕೂಗುತ್ತದೆ. ಕಾಗೆ ಕರ್ಣಕಠೋರವಾಗಿ ಕೂಗುತ್ತದೆ. ಇದೇ ಇವೆರಡಕ್ಕು ಭೇದ.

Sri Vidyabharathi Book Centre, Sringeri

CC-O. In Public Domain. Digitized by eGangotri

छायामन्यस्य कुर्वन्ति स्वय तिष्ठन्ति चातपे ।
फलन्ति च परार्थेषु नात्महेतोर्महाद्रुमाः ॥

ದೊಡ್ಡ ಮರಗಳು ತಾವು ಬಿಸಿಲಿನಲ್ಲಿಯೇ ಸದಾ ಇರುತ್ತಾ ಇತರರಿಗೆ ನೆರಳನ್ನು ಕೊಡುತ್ತವೆ ಹಾಗೆಯೇ ಹಣ್ಣುಗಳನ್ನು ಕೊಡುತ್ತವೆ ಆಗಲಿ ಅವುಗಳಿಗೆ ಸ್ವಪ್ರಯೋಜನವಿಲ್ಲ.

उपकारिषु यः साधुः साधुत्वे तस्य को गुणः ।
अपकारिषु यः साधुः स साधुः सद्भिरुच्यते ॥

ತನಗೆ ಉಪಕಾರ ಮಾಡಿದವರ ವಿಷಯದಲ್ಲಿ ಮಾನವನು ಸಾಧುವಾಗಿ ಪ್ರವರ್ತಿಸುವದು ಅಷ್ಟೇನು ವಿಶೇಷವಲ್ಲ. ಆದರೆ ತನಗೆ ಅಪಕಾರಮಾಡದವರಲ್ಲಿಯೂ ಸಾಧುವಾಗಿ ಪ್ರವರ್ತಿಸುವವನನ್ನು ಸಜ್ಜನರು ಸಾಧುವೆಂದು ಹೇಳುತ್ತಾರೆ

गुणवज्जनसंसर्गात् याति नीचोऽपि गौरवम् ।
पुष्पमालानुषङ्गेण सूत्रं शिरसि धार्यते ॥

ಸುಗುಣವಂತರ ಸಹವಾಸದ ದೆಸೆಯಿಂದ ನೀಚನೂ ಸಹ ಗೌರವಿಸಲ್ಪಡುತ್ತಾನೆ. ಹೂಗಳ ಜೊತೆಯಲ್ಲಿ ಕಟ್ಟಲ್ಪಟ್ಟ ನಾರನ್ನು ಸಹ ತಲೆಯಲ್ಲಿ ಇಟ್ಟುಕೊಳ್ಳುವರಲ್ಲವೇ !

विकृतिं नैव गच्छन्ति सङ्गदोषेण साधवः ।
आवेष्टितं महासर्पैः चन्दनं न विषायते ॥

ಸಜ್ಜನರು ಸಹವಾಸದೋಷದಿಂದ ಎಂದಿಗಾದರೂ ಬದಲಾವಣೆಯನ್ನು ಹೊಂದುವದಿಲ್ಲ. ಹೇಗೆಂದರೆ, ಚಂದನವೃಕ್ಷವು ಸರ್ಪಗಳಿಂದ ಸುತ್ತಲ್ಪಟ್ಟಿದ್ದಾಗೂ ವಿಷಯುಕ್ತವು ಆಗಲಾರದು ಅಲ್ಲವೇ !

Sri Vidyabharathi Book Centre, Sringeri

CC-O. In Public Domain. Digitized by eGangotri

महानुभावसंसर्गः कस्य नोन्नतिकारकः ।
रथ्याम्बु जाह्नवीसङ्गात् त्रिदशैरपि वन्द्यते ॥

ಮಹಾತ್ಮರೊಂದಿಗೆ ಸಹವಾಸ ಯಾರಿಗೆ ದೊಡ್ಡಸ್ಥಿತಿಯನ್ನುಂಟು ಮಾಡಲಾರದು ? ಓಣಿಯಲ್ಲಿ ಹರಿದ ಮಳೆಯನೀರು ಗಂಗಾನದಿಯಲ್ಲಿ ಬಿದ್ದು ದೇವತೆಗಳಿಂದಲೂ ವಂದಿಸಲ್ಪಡುತ್ತದೆ.

ಸುಪುತ್ರ

अजातमृतमूर्खाणां मृताजातौ सुतौ वरम् ।
सकृद्दुःखकरावाद्यौ, अन्तिमस्तु पदे पदे ॥

ಹುಟ್ಟದೇಯಿರುವನು, ಸತ್ತವನು, ಮೂರ್ಖನು, ಎಂಬ ಮೂರು ವಿಧ ಪುತ್ರರಲ್ಲಿ ಮೊದಲು, ಎರಡನೇ ಪುತ್ರರು ಮೇಲು ಯಾಕೆಂದರೇ ಇವರು ಒಂದಾವರ್ತಿ ಮಾತ್ರವೇ ದುಃಖವನ್ನುಂಟುಮಾಡುವರು. ಆದರೆ ಮೂರನೇ ಪುತ್ರನು ಮಾತ್ರ ಪದೇ ಪದೇ ದುಃಖವನ್ನುಂಟುಮಾಡುವನು.

वरमेको गुणी पुत्रो न च मूर्खशतान्यपि ।
एकश्चन्द्रः तमो हन्ति न च तारागणोऽपि च ॥

ಗುಣವಂತನಾದ ಪುತ್ರನು ಒಬ್ಬನಿದ್ದರೂ ಸಾಕು. ದಡ್ಡರು ನೂರು ಜನರಿದ್ದರೂ ಉಪಯೋಗವೇನು ? ಚಂದ್ರನೊಬ್ಬನೇ ಕತ್ತಲು ನೀಗಲು ಸಾಕು. ನಕ್ಷತ್ರಗಳು ಲೆಕ್ಕವಿಲ್ಲದಷ್ಟಿದ್ದರೂ ಕತ್ತಲು ನೀಗಿಸಲಾರವು.

एकेनापि सुवृक्षेण पुष्पितेन सुगन्धिना ।
वासितं तद्वनं सर्वं सुपुत्रेण कुलं तथा ॥

ಚೆನ್ನಾಗಿ ಹೂಗಳು ಬಿಟ್ಟು, ಸುಗಂಧಯುಕ್ತವಾದ ಒಳ್ಳೆಯ ಮರವು ಒಂದೇ ಇದ್ದರೂ ಅದರಿಂದ ವನವೆಲ್ಲವೂ ಸುವಾಸನೆ ಉಳ್ಳದ್ದಾಗಿ ಹೇಗೆ ಇರುವುದೊ ಅದೇ ರೀತಿ ಸುಪುತ್ರನು ಒಬ್ಬನಿದ್ದರೂ ಅವನಿಂದ ಅವನ ವಂಶ ವೆಲ್ಲವೂ ಕೀರ್ತಿವಂತವಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

